
ಕಲ್ಯಾಣ ಕಿರಣ

ಸೆಪ್ಟಂಬರ್ - 2005 ಬೆಲೆ : ರೂ. 5-00





॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

8	6	6	6	6	6
ಅಷ್ಟಾವರಣ	ಷಡಾಚಾರ	ಷಟಸ್ಥಲ	ಷಟ್‌ಸೂತ್ರ	ಷಟ್‌ಶೀಲ	ಷಟ್‌ಕ್ರಿಯೆ

ಸಂಪುಟ-35 ಬಸವ ಶಕೆ-872 ಆಜೀವ ಸದಸ್ಯತ್ವ 500 ರೂ.
ಸಂಚಿಕೆ-5 ಸೆಪ್ಟೆಂಬರ್-2005 ವಾರ್ಷಿಕ ಚಂದಾ 50/- ರೂ.

ಗುರು ಚರಣಕೆ ನುಡಿ ನೈವೇದ್ಯ *ಯಾರಿವರು?*







ನೀವಲ್ಲ ದುರ್ಗಮ ಕಾನನ ಗರ್ಭದಲ್ಲಿ ನಿರ್ಜನ ಗಂಹ್ವರದಿ
ಮೂಗು ಮುಚ್ಚಿ ಕುಳಿತ ಏಕಾಂತ ತಪಸಿಗಳು,
ವಿಗುರ್ಬಿಸುವ ವಿಚಿತ್ರ ಮೃಗಗಳಿಂ ತುಂಬಿಹ
ಲೋಕ ಕಾಂತಾರವ ಆತ್ಮವಿಶ್ವಾಸದಿಂ ಎದುರಿಸಿದ ಸಾಹಸಿಗಳು ನೀವು
ಇದ್ದವರು ದುಷ್ಟರು ಸತ್ತವರು ಸಜ್ಜನರು
ಎಂಬ ಲೋಕದ ನಡೆಗೆ ನಕ್ಕಿರಲ್ಲವೆ ತಾವು ?
ಸರಿದ ಆನೆಯ ಹೆಜ್ಜೆಗೆ ಧೂಪ ಆರತಿಯ ವೈಭವ
ಹೊರುವ ಆನೆಯ ಕಡೆಗೆ ತುಂಬು ಔದಾಸೀನ್ಯ.
ಅನ್ನ ನೀಡುವ ಕೈಗೆ ಕತ್ತಿ - ಕತ್ತರಿ ಚುಂಬನ
ವಿಷವನುಣಿಸುವ ಹಸ್ತಕ್ಕೆ ಗೌರವದ ಅರ್ಚನ.
ಹತ್ತಿ, ತುಳಿದು ಮುನ್ನಡೆವಂಗೆ ವೈಭವದ ತೇರು
ಮೇಲೆತ್ತಿ, ಸಂತೈಸಿ ಸಾಗುವವಗೆ ಅಪವಾದದ ಹೇರು !
ಮೌಢ್ಯದ ಕಣ್ಪಟ್ಟಿ ಕಟ್ಟಿ ಮೆರೆದಾಡುವಗೆ ಬಿರಿದು ಬಾವಲಿ
ಮೌಢ್ಯತೆಯ ಪೊರೆಕಿತ್ತು ಸತ್ಯ ದರ್ಶನ ತೋರ್ವವಗೆ ಉರಿಯ ಕಾವಲಿ.
ಇದೆಯಲ್ಲವೇ ಈ ಜಗದ ಲೀಲಾ ವಿನೋದ ? !
ಆದರೇಂ ? ಅಲ್ಪ ಕೀರ್ತಿಯ ಕಡೆಗೆ ನಿಮಗಿರಲಿಲ್ಲ ತೀಕ್ಷ್ಣ ಉನ್ಮಾದ !
ಕೋಣನ ಹೇರಿಂಗೆ ಕುನ್ನಿ ಬುಸುಗಡುವಂಥ ಜನಮನವ
ಸಹಿಸಿಕೊಂಡು, ಮತ್ತೆ ಮಾತೃಹೃದಯದಿಂ ತಿದ್ದಿ ತೀಡಿದ ತವಕಿಗಳು
ಮರೆವಿನ ತಿಮಿರಕ್ಕೆ ಶತಮಾನಗಳಿಂ ಹೊಂದಿಕೊಂಡ ಕಣ್ಣುಳ್ಳವರ
ಕಣ್ಪೊರೆಯ ವೈಚಾರಿಕತೆಯ ಶಸ್ತ್ರದಿಂ ಹರಿದ ಮರುಕಿಗಳು !
ಉಪ್ಪು ನೀರನು ನುಂಗಿ ಸವಿಯ ಜಲವನ್ನು ಈವ
ಮೇಘಾಳಿಯ ತೆರದಿ ನಿಮ್ಮ ಹಿರಿ ಬಾಳು !
ಸೊಪ್ಪು ಹಾಕದೆ ಬನ್ನಕೆ ಅದಮ್ಯ ಉತ್ಸಾಹದಿಂ ಸಾಗಿದ
ಕ್ರಾಂತಿ ಖಡ್ಗವನಾಂತ ಸಚ್ಚಿದಾನಂದ ಕಂದ
ಸ್ವಾಮಿ ಲಿಂಗಾನಂದರು ನೀವು,

-ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 500ರೂ

ಸಂಚಿಕೆ 5 ಸೆಪ್ಟಂಬರ್ 2005 ವಾರ್ಷಿಕ ಚಂದಾ 50/-ರೂ.

ಕಿರಣ ಗನ್ನಡಿ



ಚೆನ್ನ(ಬುಧ)ವಾರ ದಿ.7-9-2005 ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 74 ನೆಯ ಜಯಂತಿ



ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 48ನೆಯ ವರ್ಧಂತಿ

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, at Padmasri Printers, Rajaji nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23322790

ಕಲ್ಯಾಣ ಕಿರಣ ಮಾಸ ಪತ್ರಿಕೆ
ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

ಸಂಪಾದಕೀಯ :

1. ನೂರು ದಿಕ್ಕು ನೂರು ಧ್ವನಿ

- ಮಾತಾಜಿ

ವಿವಿಧ ಮೂಲೆಗಳಲ್ಲಿ ನಡೆಯುವ ಘಟನೆ ಅಥವಾ ಪ್ರಸಂಗಗಳ ಸುದ್ದಿ, ಹೇಳಿಕೆ ಮುಂತಾದುವನ್ನು ಈ ಶೀರ್ಷಿಕೆಯಿಂದ ಕರೆಯುವುದು ಉಚಿತ. ಸಾಮಾನ್ಯವಾಗಿ ನಾಲ್ಕೂ ದಿಟ್ಟನಿಂದ ಎಂದು ಕೆಲವು ಪತ್ರಿಕೆಗಳವರು ವಿವಿಧ ಹೇಳಿಕೆಗಳನ್ನು ಸಂಗ್ರಹಿಸಿಕೊಡುತ್ತಾರೆ. ಏಕೆಂದರೆ ಇರುವುದು ನಾಲ್ಕು ದಿಕ್ಕು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ. ಇನ್ನಷ್ಟು ವಿವರವಾಗಿ ಚಿಂತಿಸಿದರೆ ಆಗ್ನೇಯ, ಈಶಾನ್ಯ, ನೈರುತ್ಯ ವಾಯುವ್ಯ ಅಂದರೆ ಒಟ್ಟು 8, ಮತ್ತೆ ದಶದಿಕ್ಕು ಎಂದು ಆಲೋಚಿಸಿದರೆ ಮೇಲೆ, ಕೆಳಗೆ ಸೇರಿ ಹತ್ತು ದಿಕ್ಕುಗಳು. ಹೀಗಿರುವಾಗ 100 ದಿಕ್ಕುಗಳನ್ನು ಎಲ್ಲಿಂದ ತರುವುದು ? ಸಾಧ್ಯ! ಲಿಂಗಾಯತ ಸಮಾಜದ ಮಠಾಧೀಶರು ಮತ್ತು ಗಣ್ಯರ ಅಭಿಪ್ರಾಯ ವೈವಿಧ್ಯತೆಯನ್ನು ನೋಡಿದರೆ ನೂರೇನು ಇನ್ನೂರು ಧ್ವನಿಗಳನ್ನು ಅವು ಬರುವ ದಿಕ್ಕುಗಳನ್ನು ಗುರುತಿಸಬಹುದು. ಅಷ್ಟು ವೈವಿಧ್ಯತೆ. ಪರಸ್ಪರ ಜಗಳವಾಡುವ ರಾಜಕೀಯ ಮುಖಂಡರ ಜಟಾಪಟಿಯನ್ನು ನಮ್ಮ ಪಕ್ಷದಲ್ಲಿ ಪ್ರಜಾಪ್ರಭುತ್ವವಿದೆ; ಅಭಿಪ್ರಾಯ ಸ್ವಾತಂತ್ರ್ಯವಿದೆ. ಎಂದು ಕೆಲವರು ನೇತಾರರು ಕೊಚ್ಚಿಕೊಳ್ಳುವಂತೆ ಲಿಂಗಾಯತ ಸಮಾಜದಲ್ಲಿ ಅಂಥ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಹೇಳಿಕೊಳ್ಳಬೇಕಾಗುತ್ತದೆ, ಅತೀವ ಹೆಮ್ಮೆಯಿಂದ!

ಬೆಂಗಳೂರಿನ ಕುರುಬರಹಳ್ಳಿಯಲ್ಲಿ ಶರಣ ಬಸವರಾಜಪ್ಪ ಎನ್ನುವವರು ಒಂದು ಕಲ್ಯಾಣ ಮಂಟಪ ಹೊಂದಿದ್ದು ಅಲ್ಲಿ ಒಮ್ಮೆ ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳ ಪ್ರವಚನ ಏರ್ಪಡಿಸಿದ್ದರು. ಅಗನಿಂದಲೂ ಪ್ರತಿ ವಾರ ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ ನಡೆಸುತ್ತಾರೆ. ವಿಶೇಷವಾಗಿ ಬಸವ ಜಯಂತಿ ಬಸವ ಪಂಚಮಿ ಆಚರಿಸುತ್ತಾರೆ. ನಮ್ಮ ರಾಷ್ಟ್ರೀಯ ಬಸವ ದಳದವರು ಮತ್ತು ನಮ್ಮ ಅಭಿಮಾನಿ ಬಸವಾನುಯಾಯಿಗಳು ಬಸವ ಪಂಚಮಿ ಆಚರಿಸುವುದು ಅತ್ಯಂತ ಸ್ವಾಭಾವಿಕ. ಆದರೆ ಪ್ರತ್ಯೇಕ ಸಂಸ್ಥೆಯೊಂದರ ನೇತಾರರಾದ ಬಸವರಾಜಪ್ಪನವರು ಲಿಂಗಾಯತ ಧರ್ಮದ ಪ್ರಾರ್ಥನಾ ಮಂದಿರ ಎಂದು ಹೆಸರನ್ನಿಟ್ಟು ಶರಣ ಸಂಗಮ, ಬಸವ ಜಯಂತಿ, ಬಸವ ಪಂಚಮಿ ಮುಂತಾಗಿ ಆಚರಿಸುವುದು ಅಭಿನಂದನಾರ್ಹ ಮತ್ತು ಇನ್ನಿತರ ಸಂಘ, ಸಂಸ್ಥೆಗಳವರಿಗೂ ಅನುಕರಣೀಯ.

ಶರಣ.ಬಸವರಾಜಪ್ಪನವರು ಬಸವ ಪಂಚಮಿಗಾಗಿ ಮುದ್ರಿಸಿದ ಆಹ್ವಾನ ಪತ್ರ ಚಿತ್ರದುರ್ಗದ ಮುರುಘರಾಜೇಂದ್ರ ಶರಣರ ಕೈಯಲ್ಲಿ ಸಿಕ್ಕಿತಂತೆ. ಆಗ ಹೇಳಿದರಂತೆ, "ಬಸವಣ್ಣನವರು ಲಿಂಗೈಕ್ಯರಾಗಿಯೇ ಇಲ್ಲ; ಅವರ ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಲೇ ಬಾರದು." ಈ ಅಭಿಪ್ರಾಯವನ್ನು ಅಪಕ್ವ ಚಿಂತನೆ ಎನ್ನಬೇಕೋ? ಎಡವಟ್ಟು ಮಾತು ಎನ್ನಬೇಕೋ? ಮೂರ್ಖ ವಿಚಾರ ಎನ್ನಬೇಕೋ?

ಪ್ರತಿಯೊಂದು ಧರ್ಮದ ಇತಿಹಾಸವು ಆಯಾ ಧರ್ಮಗಳ ಸ್ಥಾಪಕರ ಜೀವನ ಚರಿತ್ರೆಯೊಡನೆ ಬೆಸೆದುಕೊಂಡಿರುತ್ತದೆ. ಧರ್ಮ ಸಂಸ್ಥಾಪಕರ ಜನನದ ದಿವಸ, ಅವರಿಗೆ ದೇವ ಸಾಕ್ಷಾತ್ಕಾರವಾಗಿ ಹೊಸ ಧರ್ಮದ ರೂಪುರೇಷೆ ಸ್ಫುರಿಸಿದ ದಿವಸ ಕಡೆಯದಾಗಿ ಮೃಣ್ಮಯ ಶರೀರವನ್ನು ಕಳಚಿಕೊಂಡು ಸೃಷ್ಟಿಕರ್ತನಲ್ಲಿ ಒಂದಾದ ದಿವಸ (ಬೇರೆ ಬೇರೆ ಧರ್ಮಗಳಲ್ಲಿ ಬೇರೆ ಬೇರೆ ಪರಿಕಲ್ಪನೆ ಇವೆ.) ಈ ಮೂರೂ ಮಹತ್ವಪೂರ್ಣವಾದವು.

ಶ್ರೀ ಹರ್ಡೇಕರ್ ಮಂಜಪ್ಪನವರು ಮತ್ತು ಧಾರವಾಡದ ಮುರುಘಾ ಮಠದ ಪೂಜ್ಯ ಮೃತ್ಯುಂಜಯ ಸ್ವಾಮಿಗಳು ಬಸವಣ್ಣನವರು ಹುಟ್ಟಿದ ದಿವಸ ಬಸವ ಜಯಂತಿ ಆಚರಿಸುವ ಪರಿಪಾಠ ಬಳಕೆಗೆ ತಂದರು.ಇನ್ನೆರಡು ದಿನಾಂಕ ಬಗ್ಗೆ ನಾವು ಹುಡುಕಾಡುತ್ತ 1977ರಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿದೆವು.ಮೈಸೂರು ವಿ.ವಿಯ ತೆಲುಗು ವಿಭಾಗದ ಮುಖ್ಯಸ್ಥರಾದ ಡಾ॥ಬಾಡಾಲ ರಾಮಯ್ಯನವರನ್ನು ಅತಿಥಿಗಳೆಂದು ಆಹ್ವಾನಿಸಿದ್ದಾಗ ಅವರು ಮಾತನಾಡುತ್ತ "ಬಹಳ ಕಷ್ಟಪಟ್ಟು ಸಂಶೋಧಿಸಿ ಸಾಧಾರ ಪೂರ್ವಕವಾಗಿ ಬಸವಣ್ಣನವರ ಲಿಂಗೈಕ್ಯ ದಿವಸವನ್ನು ಗುರುತಿಸಿರುವುದಾಗಿಯೂ ಆದರೆ ಯಾರು ಅವರ ಸಂಶೋಧನೆಯತ್ತ ಗಮನ ಹರಿಸಿಲ್ಲ" ಎಂದು ತಿಳಿಸಿದರು. ಪೂಜ್ಯ ಅಪ್ಪಾಜಿಯವರಿಗೆ, ನನಗೆ ಅಚ್ಚರಿಯಾಗಿ

ವಿವರವನ್ನು ಕೇಳಲಾಗಿ, ಬಸವೇಶ್ವರ ವಚನಾಲು ಎಂಬ ತೆಲುಗು ವಚನ ಸಂಗ್ರಹವನ್ನು ಸಂಪಾದಿಸಿರುವುದಾಗಿಯೂ, ಸಿರಿಗೆರೆ ತರಳಬಾಳು ಬೃಹನ್ಮಠದವರು ಅದನ್ನು ಪ್ರಕಟಪಡಿಸಿರುವುದಾಗಿಯೂ ಆ ಪುಸ್ತಕಕ್ಕೆ ವಿವರವಾದ ಮುನ್ನುಡಿ ಬರೆದು ಈ ಎಲ್ಲ ವಿಷಯ ಚರ್ಚಿಸಿರುವುದಾಗಿಯೂ ತಿಳಿಸಿದರು. ನನಗೆ ತೆಲುಗು ಬರದು. ನಮ್ಮಲ್ಲಿ ಒಬ್ಬ ಸಾಧಕರಿಗೆ ತೆಲುಗು ಬರುತ್ತಿತ್ತು. ನಮಗೆ ಅಗತ್ಯವಿರುವ ಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ ಓದಿ ನಂತರ ಬಸವ ಪಂಚಮಿ ಆಚರಣೆಯನ್ನು ಬಳಕೆಗೆ ತಂದೆವು. ಅದು ವ್ಯಾಪಕವಾಗಿ ಇದೀಗ ಆಚರಿಸಲ್ಪಡುತ್ತಿದೆ.

ಉಳಿದ ಲಿಂಗಾಯತ ಮಠಾಧೀಶರು ಈ ಬಗ್ಗೆ ಕನಿಷ್ಠ ಆಸಕ್ತಿಯನ್ನೂ ತೋರಿಸದೆ ಇನ್ನೂ ನಾಗರಪಂಚಮಿ ಎಂದೇ ಬಳಸುತ್ತಾರೆ. ಇದಕ್ಕೆ ಕಾರಣ ವೈಯಕ್ತಿಕ ಮತ್ಸರ. ನಿಜವಾಗಿಯೂ ನೋಡಿದರೆ ಇವರ ಸಂಶೋಧಕಳು ನಾನಲ್ಲ; ಶ್ರೀ ಬಾಡಾಲ ರಾಮಯ್ಯನವರು. ತೆಲುಗು ಬ್ರಾಹ್ಮಣ ಪಂಡಿತರೊಬ್ಬರ ಸಂಶೋಧನೆ, ನಮಗೂ ಅಗತ್ಯವಿದ್ದ ಹಬ್ಬ ಎಂದು ಗುಣಗ್ರಾಹಕ ದೃಷ್ಟಿಯಿಂದ ನಾವು ಆಚರಿಸಲು ಆರಂಭಿಸಿದೆವು. ಬಸವಣ್ಣನವರು ಲಿಂಗೈಕ್ಯರಾದ ಶ್ರಾವಣ ಶುದ್ಧ ಪಂಚಮಿಯನ್ನು ನಾಗರ ಪಂಚಮಿ ಎಂದು ಒಂದು ಕ್ಷುದ್ರ ಜಂತು(ಹಾವು)ವಿನ ಹೆಸರಿನಿಂದ ಕರೆಯುವುದು ಹೆಮ್ಮೆಯ ಸಂಗತಿಯೋ ಅಥವಾ ಧರ್ಮಗುರು ಬಸವಣ್ಣನವರ ಹೆಸರಿನಿಂದ ಕರೆಯುವುದು ಹೆಮ್ಮೆಯ ಸಂಗತಿಯೋ? ವೀರಶೈವವಾದಿ ಪಂಚಾಚಾರ್ಯ ಸ್ವಾಮಿಗಳನ್ನು ಬಿಡೋಣ, ವಿರಕ್ತರಿದ್ದೂ ಬಸವ ನಿಷ್ಠೆ ಇಲ್ಲದವರನ್ನು ಬಿಡೋಣ ಆದರೆ ಬಸವ ತತ್ತ್ವದ ಪಾಲಕರೆಂದು ಬಿರುದಾಂಕಿತರಾದವರು ಸಹ ಈ ಮಹತ್ವದ ಆಚರಣೆ ಮಾಡದೆ ಇದ್ದರೆ ಅದು ನಾಚಿಕೆಗೇಡಿನ ಸಂಗತಿಯಲ್ಲವೆ ? ಸಮಾಜಕ್ಕೆ ಧರ್ಮಗುರು ಬಸವಣ್ಣನವರು ಲಿಂಗೈಕ್ಯರಾದ ದಿವಸವಂತೂ ಅತ್ಯಂತ ಮಹತ್ವಪೂರ್ಣವಾದುದು. ಒಂದು, ಇವರು ತಾವಾದರೂ ಸಂಶೋಧಿಸಿ ಕೊಡಬೇಕು. ಇಲ್ಲವೇ ಡಾ|| ಬಾಡಾಲ ರಾಮಯ್ಯ ಸಂಶೋಧಿಸಿದ್ದನ್ನಾದರೂ ಒಪ್ಪಿಕೊಳ್ಳಬೇಕಲ್ಲವೆ? ಅದಕ್ಕೆಂದೇ ಈ ಬರಹಕ್ಕೆ ಶೀರ್ಷಿಕೆ ಕೊಟ್ಟದ್ದು ನೂರು ದಿಕ್ಕು ನೂರು ಧ್ವನಿ ಎಂದು.

810ನೆಯ ಯಶಸ್ವಿ ಬಸವ ಪಂಚಮಿ

ಈ ಸಲದ ಬಸವ ಪಂಚಮಿಯು ಬುಧವಾರ ದಿ.10-8-2005ರಂದು ಬಂದಿತು. ಅದು ಕಾಯಕದ ದಿನ. ಆದರೂ ಚಿಂತೆಯಿಲ್ಲ ಎಂದು ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಕಾರ್ಯಕ್ರಮ ಇಟ್ಟೆವು. ಯಾವ ದಿವಸ ಮುಖ್ಯವೋ ಅಂದಂದೇ ಕಾರ್ಯಕ್ರಮ ಮಾಡುವುದೇ ಉಚಿತ, ಆ ಶ್ರದ್ಧೆ ಬೆಳೆದು ಬರಬೇಕು ಎಂಬುದೇ ನಮ್ಮ ಆಶಯ. ನಮಗೆ ತುಂಬಾ ಸಂತೋಷ ತಂದ ಸಂಗತಿ ಏನೆಂದರೆ ನಿರೀಕ್ಷೆಗೆ ಮೀರಿ ಜನ ಬಂದರು. ಕೆಳಗಿನ ಎಲ್ಲ ಆಸನ ಭರ್ತಿಯಾಗಿ, ಮೇಲೂ ಕುಳಿತರು; ಜಾಗವು ಸಾಕಾಗದೆ ಹೊರಗೆಲ್ಲ ನಿಂತರು. ನಂತರ ಮೆರವಣಿಗೆಯಲ್ಲೂ ಬಹಳ ಜನ. ವಿಷಾದನೀಯ ಸಂಗತಿ ಎಂದರೆ ಅಥಣಿ ತಾಲ್ಲೋಕಿನ ಮತ್ತು ಮಹಾರಾಷ್ಟ್ರದ ಗಡಿ ನಾಡಿನ ರಾಷ್ಟ್ರೀಯ ಬಸವ ದಳಗಳವರು, ಇಚಲ ಕರಂಜಿಯ ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ ಇವರುಗಳೆಲ್ಲ ಹೊರಟು ನಿಂತವರು ಕೃಷ್ಣಾ, ಪಂಚಗಂಗಾ ನದಿಯ ಉಕ್ಕೇರಿದ ಪ್ರವಾಹದಿಂದಾಗಿ ಬರಲು ಸಾಧ್ಯವಾಗದೆ ಹೋಯಿತು. ಬಿಳಿಯ ವಸ್ತ್ರಗಳನ್ನು ಧರಿಸಿ, ಅದರ ಮೇಲೆ ಬಸವ ರಕ್ಷೆ(ಸ್ಕಾರ್ಫ್)ಹೊದ್ದು ಶರಣ ಬಂಧುಗಳು ಮೆರವಣಿಗೆಯಲ್ಲಿ ಸಾಗಿದ್ದು ಬಹಳ ಜನರ ಗಮನವನ್ನು ಸೆಳೆಯಿತು. ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಅಶ್ವಾರೂಢ ಪುತ್ಥಳಿಗೆ ಮಾಲಾರ್ಪಣೆ-ಪುಷ್ಪ ವೃಷ್ಟಿ ಮಾಡಿ ಮೆರವಣಿಗೆಯನ್ನು ಪೂರ್ಣಗೊಳಿಸಲಾಯಿತು. ಮಳೆ ಮಾತ್ರ ಕಡೆಯಲ್ಲಿ ಧೋಧೋ ಎಂದು ಧಾರಾಕಾರವಾಗಿ ಸುರಿದು, ಶರಣರನ್ನು ತೋಯಿಸಿತು. ಅದನ್ನೂ ಪುಷ್ಪ ವೃಷ್ಟಿ ಎಂದೇ ಶರಣರು ಸ್ವೀಕರಿಸಿದರು. ಬೆಂಗಳೂರಂತಹ ಪಟ್ಟಣದಲ್ಲಿ ಅಷ್ಟೊಂದು ಜನರು ಸೇರಿದ್ದು ಎಲ್ಲರಿಗೂ ಆಶ್ಚರ್ಯ ಉಂಟು ಮಾಡಿತಲ್ಲದೆ ಭಕ್ತಿಯನ್ನು ಪ್ರಕಟಿಸಲು ಅವಕಾಶಬೇಕು ಅಷ್ಟೆ ಎಂಬುದನ್ನು ಸಾಬೀತು ಪಡಿಸಿತು.

2. ಬೆಕ್ಕಿಗೆ ಚಿನ್ನಾಟ ಇಲಿಗೆ ಪ್ರಾಣ ಸಂಕಟ

ದಿ.11.8.2005 ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಒಂದು ಫೋಟೋ ಪ್ರಿಂಟಾಗಿದೆ. ಅದರಲ್ಲಿ ಕೆಲವು ಅಧಿಕಾರಿಗಳು ರಸ್ತೆಯ ಮೇಲೆ ನಿಂತಿರುವ ಪಾದ ಮಟ್ಟದ ನೀರಿನಲ್ಲಿ ನಡೆದುಕೊಂಡು ಬರುತ್ತಿದ್ದಾರೆ. ಇದರಲ್ಲಿ ಮುಖ್ಯವಾದವರು ಕೇಂದ್ರ ಗೃಹ ಸಚಿವಾಲಯದ ಪ್ರವಾಹ ವಿಕೋಪ ನಿರ್ವಹಣಾ ಕಾರ್ಯದರ್ಶಿ ಡಿ.ವಿ.ಶಂಕರನ್, ಜಿಲ್ಲಾಧಿಕಾರಿ ಡಾ. ಶಾಲಿನಿ ರಜನೀಶ್, ಮತ್ತು ವಿ. ಉಮೇಶ್. ನೀರಿನಲ್ಲಿ ನಡೆದುಕೊಂಡು ಬರುತ್ತಿರುವುದು ಅವರಿಗೆ ತಮಾಷೆಯಂತೆ ಕಂಡಿರಬಹುದು . ಇವರುಗಳ ಮುಖದ ಮೇಲೆ ಮುಗುಳ್ನಗೆ ಹರಡಿ ಪ್ರಫುಲ್ಲಿತವಾಗಿವೆ . ಸಮುದ್ರ ದಂಡೆಯಲ್ಲಿ ಖುಷಿಯಿಂದ ಸಂಚರಿಸುವಾಗ ಪಡುವ ಆನಂದದ ಮುಖಭಾವ ತೋರುತ್ತಿದೆ. ಕಂಡು ನನ್ನ ಮನಸ್ಸಿಗೆ ತೀವ್ರ ವೇದನೆ ಎನಿಸಿತು. ಕೃಷ್ಣಾ ನದಿಯ ಆಟಾಟೋಪಕ್ಕೆ ಸಿಕ್ಕಿ ಪ್ರವಾಹದಿಂದ ನಲುಗಿರುವ ಅಥಣಿ ತಾಲ್ಲೋಕಿನ ನೆರೆ ಪೀಡಿತ ಹಳ್ಳಿಗಳ ಸಮೀಕ್ಷೆಗೆ ಬಂದ ಅಧಿಕಾರಿಗಳಿವರು. ಜನಗಳ ಸಂಕಷ್ಟದ ಕಥೆ ಕೇಳುತ್ತಿದ್ದರೆ ಎಂಥಾ ಕಲ್ಲೆದೆಗಳೂ ಕರಗಿ ನೀರಾಗುತ್ತವೆ.ಆದರೆ ಈ ಅಧಿಕಾರಿಗಳಿಗೆ ಆ ಸಂಕಷ್ಟದ ಜಳ ಸ್ವಲ್ಪವೂ ಬಡಿದಂತೆ ತೋರದು . ಸಾವಿನ ಮನೆಗೆ ಹೋಗಿ ನಸುನಗುವಂತೆ ಭಾಸವಾಗುತ್ತದೆ. ಬೆಕ್ಕಿಗೆ ಚಿನ್ನಾಟ ಇಲಿಗೆ ಪ್ರಾಣ ಸಂಕಟ ಎಂಬ ಗಾದೆಗೆ ಈ ಛಾಯಾಚಿತ್ರ ವಿವರಣೆ ಬರೆದಂತೆ ಎನಿಸಿತು.

3. ಕಾಕತಾಳೀಯ ಇಳಿತ- ಏರುವಿಕೆ

ದಿ. 23.7.2005 ರಂದು ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಮದ್ಯಪಾನ ವಿರೋಧಿ ಸಂಸ್ಥೆಯ ವತಿಯಿಂದ ಒಂದು ಚಿಂತನ ಗೋಷ್ಠಿ ಇಟ್ಟಿರುವುದಾಗಿಯೂ ಅದರ ಉದ್ಘಾಟನೆಯನ್ನು ನಾನು ನೆರವೇರಿಸಬೇಕೆಂದು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ.ಟಿ. ಬಾಬು ಅವರು ಆಹ್ವಾನಿಸಿದರು. ಉದ್ಘಾಟನೆ ಮಾಡಿ, ಮಾತನಾಡಿ ಬಂದೆ.ಒಂದು ಪ್ರತಿಭಟನಾ ಪ್ರದರ್ಶನ ಇಡುವ ಬಗ್ಗೆ ತಿಳಿಸಿದರು. ನಮ್ಮ ಸಂಪೂರ್ಣ ಸಹಕಾರವಿದೆ ಎಂದು ಹೇಳಿದೆವು . ಪ್ರತಿಭಟನೆಯ ಉದ್ದೇಶ ಸಾವಿರ ಜನಕ್ಕೊಂದು ಸಾರಾಯಿ ಅಂಗಡಿ ತೆರೆಯುವ ಉದ್ದೇಶವಿರುವುದಾಗಿ ಅಂದಿನ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ್ದು , ಇಂಥ ಹುಚ್ಚು ವಿಚಾರವನ್ನು ವಿರೋಧಿಸುವುದೇ ಆಗಿತ್ತು.ಶುಕ್ರವಾರ ದಿ.29.7. 2005 ರಂದು ಪ್ರತಿಭಟನಾ ಪ್ರದರ್ಶನ. ಪೂಜ್ಯ ಚನ್ನಬಸವಾನಂದ ಸ್ವಾಮಿಗಳನ್ನೂ ,ಬೆಂಗಳೂರು ರಾಷ್ಟ್ರೀಯ ಬಸವ ದಳದ ಕೆಲವು ಕಾರ್ಯಕರ್ತರನ್ನೂ ಕಳಿಸಿದೆವು. ಸುಮಂಗಲಿ ಸೇವಾಶ್ರಮದ ಶರಣೆ .ಸುಶೀಲಮ್ಮನವರು ನೂರಾರು ಕಾರ್ಯಕರ್ತರೊಡನೆ ಆಗಮಿಸಿದರು . ಅಂತೂ ಸಾವಿರಾರು ಜನರು ಸೇರಿದರು. ಇವರು ಸಲ್ಲಿಸಲಿರುವ ಮನವಿಯನ್ನು ಸ್ವೀಕರಿಸಲು ಮುಖ್ಯ ಮಂತ್ರಿಗಳು ಬರಬೇಕಿತ್ತು, ಬರಲಿಲ್ಲವಂತೆ. ಸರ್ಕಾರದ ಪ್ರತಿನಿಧಿಗಳು ಬರುವ ತನಕ ಕದಲುವುದಿಲ್ಲ ಎಂದು ಪ್ರತಿಭಟನಕಾರರ ಛಲ. ಪೋಲೀಸ್ ಇಲಾಖೆಯವರು ಸಾವಿರಾರು ಜನರು ಸೇರಿರುವ ಸುದ್ದಿ ಮುಟ್ಟಿಸಿದರು. ಹೀಗಾಗಿ ಸರ್ಕಾರದ ಪ್ರತಿನಿಧಿಯಾಗಿ ಅಂದಿನ ಕಂದಾಯ ಮಂತ್ರಿಗಳಾಗಿದ್ದ ಶ್ರೀ ಎಂ.ಪಿ.ಪ್ರಕಾಶ್ ಬಂದರು. ಸರ್ಕಾರದ ಇಂಥ ನಿರ್ಧಾರ ಸರಿಯೇ ? ಈಗಾಗಲೇ ಕುಡಿತದಿಂದ ಸಾಕಷ್ಟು ಕುಟುಂಬಗಳು ದುರಂತ ಎದುರಿಸುತ್ತಿರುವಾಗ ಸಾವಿರ ಜನಕ್ಕೊಂದು ಸಾರಾಯಿ ಅಂಗಡಿ ಎಂಬ ವಿಚಾರ ಸರಿಯೇ ಎಂದು ಆಕ್ರೋಶದಿಂದ ಪ್ರಶ್ನಿಸಿದಾಗ ಶ್ರೀ ಪ್ರಕಾಶ ಅವರು, "ಇದು ಉಪಮುಖ್ಯ ಮಂತ್ರಿ ಸಿದ್ಧರಾಮಯ್ಯನವರ ವೈಯಕ್ತಿಕ ಹೇಳಿಕೆ; ಸರ್ಕಾರದ ನಿರ್ಧಾರವಲ್ಲ. ನನ್ನ ಅಂತರಾತ್ಮವೂ ಒಪ್ಪಲಿಲ್ಲ. ನಾನೂ ಆಕ್ಷೇಪಿಸಿದ್ದೇನೆ. ಜನರ ಅಭಿಪ್ರಾಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ." ಎಂದು ಮನವಿ ಸ್ವೀಕರಿಸಿ ಹೋದರಂತೆ.

ಅವರು ನಿರ್ಗಮಿಸಿದ ಮೇಲೆ ಚಳುವಳಿಕಾರರು ಸಿದ್ದರಾಮಯ್ಯನವರ ಪ್ರತಿಕೃತಿಯನ್ನು ಸುಡಬೇಕೆಂದು ಸ್ವಾಮೀಜಿಗಳನ್ನು ಒತ್ತಾಯಿಸಿದರಂತೆ. ಸ್ವಾಮೀಜಿಗಳು, ಕಾರ್ಯಕರ್ತರು ಪ್ರತಿಕೃತಿಯನ್ನು ಸುಟ್ಟರಂತೆ. ನಂತರ ಎಲ್ಲರೂ ನಿರ್ಗಮಿಸಿದರು. ಅಂದಿನಿಂದ ಸುಮಾರು 2 ವಾರಗಳ ಅವಧಿಯಲ್ಲಿ ನಡೆದ ವಿಲಕ್ಷಣ ಮತ್ತು ಅನಿರೀಕ್ಷಿತ ಘಟನೆಗಳನ್ನು ನೋಡಿದರೆ ಇದೆಷ್ಟು ಕಾಕತಾಳೀಯ ಎನ್ನಿಸದೆ ಇರದಲ್ಲವೆ?

ಸಾವಿರ ಜನಕ್ಕೊಂದು ಸಾರಾಯಿ ಅಂಗಡಿ ತೆರೆಯುವ ಹಿಂದುಳಿದ ವರ್ಗದ ಹಿತಚಿಂತಕರಾದ ಸಿದ್ದರಾಮಯ್ಯನವರು ಯಾವ ರೀತಿ ಅವರ ಹಿತರಕ್ಷಕರೋ? 'ಅಹಿಂದ' (ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳವರು, ದಲಿತರು)ದವರು ಹೆಚ್ಚಿನ ಜನರು ಕುಡಿತದಿಂದ ಎಂಥ ದಯನೀಯ ಸ್ಥಿತಿಗೆ ಬರುತ್ತಿದ್ದಾರೆಂಬುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿ. ಅವರ ಹೇಳಿಕೆಯಿಂದ ಸಿಟ್ಟಿಗೆದ್ದ ಗಾಂಧಿವಾದಿಗಳು ಪ್ರತಿಭಟನೆ ಮಾಡಿ ಪ್ರತಿಕೃತಿ ಸುಟ್ಟ 2-3 ದಿನಗಳಲ್ಲಿ ಉಪಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಯಿತು. ಮನವಿ ಸ್ವೀಕರಿಸಿ ಹೋದ ಎಂ.ಪಿ.ಪ್ರಕಾಶ್ ಉಪಮುಖ್ಯಮಂತ್ರಿಯಾದರು. ಈ ಘಟನೆ ಕಾಕತಾಳೀಯವೆನಿಸಿದರೂ ಅತ್ಯಂತ ಸಾಂಕೇತಿಕ ಎನಿಸುತ್ತಿದೆಯಲ್ಲವೆ?

★ ★ ★ ★ ★ ★

ನೆರೆ ಸಂತ್ರಸ್ತರಿಗೆ ಬಸವ ಧರ್ಮ ಪೀಠ/ ರಾ.ಬ.ದಳಗಳ ನೆರವು

ಕೃಷ್ಣಾ, ಪಂಚಗಂಗಾ, ಭೀಮಾ ಮುಂತಾದ ನದಿಗಳ ಪ್ರವಾಹದಿಂದ ಕರ್ನಾಟಕದ ಕೆಲವು ಜಿಲ್ಲೆಗಳಾದ ಬೆಳಗಾಂವ, ಬಾಗಲಕೋಟೆ, ಗುಲಬರ್ಗಾ ಮುಂತಾದವು ಮಹಾರಾಷ್ಟ್ರ ಗಡಿಯಲ್ಲಿರುವ ಸಾಂಗ್ಲಿ, ಕೊಲ್ಹಾಪುರದ ಕೆಲವು ಭಾಗ ಅತೀವ ಸಂಕಷ್ಟಕ್ಕೆ ಒಳಗಾದವು. ಬಸವ ಧರ್ಮ ಪೀಠದ ಅಂಗ ಸಂಸ್ಥೆಯಾದ ರಾಷ್ಟ್ರೀಯ ಬಸವ ದಳದಿಂದ ಕೆಲವು ಗ್ರಾಮಗಳವರಿಗೆ ಕೈಲಾದ ಸಹಾಯ ಮಾಡಲು ಮತ್ತು ಸಾಂತ್ವನ ನೀಡಲು ನಿರ್ಧರಿಸಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಂಕಲ್ಪಿಸಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳನ್ನು ಕಳಿಸಿದರು. ಪಾದ ಯಾತ್ರೆಯ ಮೂಲಕ ಬೈಲಹೊಂಗಲದ ರಾ.ಬ.ದಳದ ಅಧ್ಯಕ್ಷ ಅಣ್ಣಪ್ಪ ವಾಲಿಯವರ ನೇತೃತ್ವದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪರಿಹಾರ ಸಾಮಗ್ರಿ ಸಂಗ್ರಹಣೆಯನ್ನು ಉದ್ಘಾಟಿಸಿದರು. ಪೂಜ್ಯ ಚನ್ನಬಸವಾನಂದ ಸ್ವಾಮಿಗಳು ಬೈಲಹೊಂಗಲ, ಗೋಕಾಕ್, ಬೆಳಗಾಂ, ಸಂಕೇಶ್ವರಗಳ ರಾ.ಬ,ದಳಗಳವರೊಡನೆ ಹಣ, ದವಸಧಾನ್ಯ, ಬಟ್ಟೆ ಇತ್ಯಾದಿ ಸಂಗ್ರಹಿಸಿ ನೆರೆ ಪೀಡಿತ ಕೆಲವು ಗ್ರಾಮಗಳಿಗೆ ಭೇಟಿ ಕೊಟ್ಟರು, ಬೇರೆ ಸಂಘ-ಸಂಸ್ಥೆಗಳ ಮೂಲಕ ವಿತರಿಸದೆ ತಾವೇ ನೇರವಾಗಿ ಸಂತ್ರಸ್ತರನ್ನು ಭೇಟಿಯಾಗಿ ಸಂಗ್ರಹಿಸಿದ ವಸ್ತುಗಳನ್ನು ಹಂಚಿದರು. ಅಥಣಿ ತಾಲ್ಲೋಕಿನ ಶೇಗುಣಸಿ, ಶಂಕರಹಟ್ಟಿ, ದರೂರು, ನದಿ ಇಂಗಳಗಾಂವ, ಬಳವಾಡ ಮುಂತಾದ ಗ್ರಾಮಗಳನ್ನು ಸಂದರ್ಶಿಸಿ ಪರಿಹಾರ ವಿತರಿಸಿದ್ದಲ್ಲದೆ ಸಾಂತ್ವನ ಹೇಳಿದರು. ದಿ.25ರಂದು ಬೆಳಿಗ್ಗೆ 11 ಗಂಟೆಗೆ ಅಥಣಿಯ ತಹಸೀಲಾರರ ಕಾರ್ಯಾಲಯದ ಎದುರು ಪ್ರವಾಹ ಪೀಡಿತ 26 ಗ್ರಾಮಗಳ ಜನರು ನಡೆಸುತ್ತಿರುವ ಧರಣ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.

ಮಹಾರಾಷ್ಟ್ರವನ್ನು ಸಂದರ್ಶಿಸಿದ ಪೂಜ್ಯ ಸ್ವಾಮಿಗಳು ದಿ.27ರಂದು ಇಚಲಕರಂಜಿಯಿಂದ ಹೊರಟು ಶಿರೋಳ ತಾಲ್ಲೋಕಿನ ಬಸ್ತವಾಡ, ಮಜರೇವಾಡಿ, ರಾಜಾಪುರ, ಬಿದ್ರಾಪುರ, ದಾನವಾಡ, ಅಕ್ಕಿವಾಟ, ಧರಣಗುತ್ತಿ, ಶೆಡಶ್ಯಾಳ, ಗಣೇಶವಾಡಿ ಮುಂತಾದ ಗ್ರಾಮಗಳ ಜನರನ್ನು ಸಂದರ್ಶಿಸಿ ಧೈರ್ಯವನ್ನು ತುಂಬಿದರು. ಎರಡು ಸ್ಮರಣಾರ್ಹ ಸಂಗತಿಗಳೆಂದರೆ ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಅನೇಕ ಕಡೆ ತಮ್ಮ ಜೀವಭಯ ತೊರೆದು ಹಲವಾರು ಜನರನ್ನು ಈಜಿ ದಂಡೆಗೆ ತಂದು ಉಳಿಸಿದುದು ಮತ್ತು ನೆರವು ನೀಡಲು ಹೋದವರಿಗೆ ತಮಗಿಂತಲೂ ಹೆಚ್ಚಿನ ಸಂಕಷ್ಟದಲ್ಲಿರುವ ದಲಿತರಿಗೆ ಬಡವರಿಗೆ ಕೊಡಬೇಕೆಂದು ವಿನಂತಿ ಮಾಡಿ ಕೊಡಿಸಿದುದು. ಅಥಣಿ ತಾಲ್ಲೋಕು ಮತ್ತು ಮಹಾರಾಷ್ಟ್ರದ ಶಿರೋಳ ತಾಲ್ಲೋಕಿನಲ್ಲಿ ರಾಷ್ಟ್ರೀಯ ಬಸವ ದಳದ ಶಾಖೆಗಳು ಸಕ್ರಿಯವಾಗಿ ಕಾರ್ಯ ಮಾಡಿದ್ದು ಬಹಳ ಜನರ ಮೆಚ್ಚುಗೆ ಗಳಿಸಿಕೊಂಡಿದೆ.

-ವರದಿ : ದೊಡ್ಡ ವೀರಪ್ಪ

ವಿ.ಹಿಂ.ಪ. ಅಧ್ಯಕ್ಷ ಶ್ರೀ ಅಶೋಕ್ ಸಿಂಘಾಲರಿಗೆ ಒಂದು ಪತ್ರ

ಸನ್ಮಾನ್ಯ ಶ್ರೀ ಅಶೋಕ ಸಿಂಘಾಲ್
ಅಧ್ಯಕ್ಷರು, ವಿಶ್ವ ಹಿಂದೂ ಪರಿಷತ್
ನವ ದೆಹಲಿ

ಇವರಿಗೆ ಶುಭ ಹಾರೈಕೆಗಳು.

ನಮ್ಮ ಕರ್ನಾಟಕದ ಪ್ರಮುಖ ಹಾಗೂ ಜನಪ್ರಿಯ ಪತ್ರಿಕೆಗಳಲ್ಲಿ ಒಂದಾದ ಸಂಯುಕ್ತ ಕರ್ನಾಟಕದ ದಿ.15-8-2005 ರ ಸಂಚಿಕೆಯ ಪುಟ 5ರಲ್ಲಿ ಒಂದು ವಿಷಯವು ಪ್ರಕಟಗೊಂಡಿದೆ. ಅದರ ಸಾರಾಂಶವೇನೆಂದರೆ, "ವಿಶ್ವ ಹಿಂದೂ ಪರಿಷತ್ತು ಸಿಖ್ಖರ 10ನೇ ಗುರು ಮತ್ತು ಖಾಲ್ಸಾ ಪಂಥದ ಸಂಸ್ಥಾಪಕ ಗುರು ಗೋವಿಂದ ಸಿಂಗ್ ರೂಪಿಸಿದ ಸಿಖ್ ಧರ್ಮವನ್ನು ಪ್ರತ್ಯೇಕ ಧರ್ಮ ಎಂದು ಒಪ್ಪಿಕೊಂಡಿದೆ." ಎಂಬುದು.

ಅಮೃತಸರದ ಸಮಾವೇಶದಲ್ಲಿ ವಿ.ಹೆಚ್ ಪಿ ಮುಖಂಡರು ಸಿಖ್ ಧರ್ಮವು ಹಿಂದು ಧರ್ಮದ ಒಂದು ಭಾಗ ಎಂದು ಕರೆದ ಕಾರಣ ಬಂದ ದೂರಿನಿಂದಾಗಿ ನಿರ್ದಿಷ್ಟ ಹೇಳಿಕೆ ನೀಡುವಂತೆ ಎನ್.ಸಿ.ಎಂ (ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ) ತಿಳಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿ ತಾವು ಸಿಖ್ ಧರ್ಮದ ಪ್ರತ್ಯೇಕ ಅಸ್ತಿತ್ವ ಕುರಿತಂತೆ ಯಾವುದೇ ವಿವಾದ ಉಂಟಾಗಲು ವಿ ಹೆಚ್ ಪಿ ಅವಕಾಶ ನೀಡುವುದಿಲ್ಲ ಎಂದೂ ತಾವು ಎನ್.ಸಿ.ಎಂಗೆ ಭರವಸೆ ಕೊಟ್ಟಿದ್ದೀರಿ. ನಿಮ್ಮ ಪ್ರತಿಕ್ರಿಯೆ, ಅಭಿಪ್ರಾಯ ಅತ್ಯಂತ ಸೂಕ್ತವಾಗಿವೆ.

ವಿಶ್ವ ಹಿಂದೂ ಪರಿಷತ್ ಮನೋಭಾವದಲ್ಲಿ ಬದಲಾವಣೆ ತೀರಾ ಅಗತ್ಯ

ಸುತ್ತಲೂ ಅಪ್ಪಳಿಸುತ್ತಿರುವ ಸಮಸ್ಯೆಗಳ ಅಲೆಗಳ ಹೊಡೆತವನ್ನು ಗಮನಿಸದೆ ದಂತಗೋಪುರದಲ್ಲಿ ಕುಳಿತು ಭಾವಾವೇಶದಲ್ಲಿ ಮಾತನಾಡುವುದು ಸುಲಭ. ನಾವೂ ಸಹ ಭಾರತೀಯ ಧಾರ್ಮಿಕ ಪರಂಪರೆಯ ಬಗ್ಗೆ ಅಭಿಮಾನದಿಂದ ಮಾತನಾಡುವುದುಂಟು. ಒಳಗೆ ಅಂತರಂಗವು ಅಳುಕುತ್ತಿದ್ದರೂ ಅದನ್ನು ತೋರಿಸಿಕೊಳ್ಳದೆ ಭಾರತೀಯ ಪರಂಪರೆಯ ಬಗ್ಗೆ ಅಭಿಮಾನದಿಂದ ಮಾತನಾಡುತ್ತೇವೆ. ಆದರೆ ಆತ್ಮಾವಲೋಕನ ಮಾಡಿಕೊಂಡಾಗ ಖಿನ್ನತೆ ಉಂಟಾಗುತ್ತದೆ. ದಿ|| ಶ್ರೀ ಸಾವರ್‌ಕರ್, ದಿ|| ಶ್ರೀ ಗೋಲ್ವಾಲ್ಕರ್ ಗುರೂಜಿ ಮುಂತಾದವರು ಬಹಳ ವಿಶಾಲವಾಗಿ ಹಿಂದು ವ್ಯಾಖ್ಯಾನ ಕೊಟ್ಟರು. ನಮ್ಮ ಪೂಜ್ಯ ಲಿಂಗೈಕ್ಯ ಜಗದ್ಗುರು ಲಿಂಗಾನಂದ ಸ್ವಾಮಿಗಳು, ನಾವು ಮತ್ತು ನಮ್ಮ ಸಂಸ್ಥೆಯವರು ಹಿಂದುತ್ವದ ವಿಶಾಲ ಕಲ್ಪನೆಯನ್ನು ಜನರಲ್ಲಿ ಬಿತ್ತಲು ಶ್ರಮಿಸಿದೆವು. ಒಂದು ದಶಕ ಕಾಲ ಅಲ್ಲಲ್ಲೇ ವಿಶ್ವ ಹಿಂದು ಪರಿಷತ್‌ದ ಶಾಖೆಗಳನ್ನು ತೆರೆಯಲು ಉತ್ಸುಕರಾಗಿದ್ದೆವು. ಓಂಕಾರವನ್ನು ನಂಬುವವರು, ಭಾರತವನ್ನು ಧರ್ಮಭೂಮಿ ಎಂದು ಭಾವಿಸುವ ಶೈವ-ವೈಷ್ಣವ, ಜೈನ-ಬೌದ್ಧ, ಲಿಂಗಾಯತ-ಸಿಖ್ ಎಲ್ಲರೂ ಹಿಂದುಗಳು ಎಂದೇ ಪ್ರಚಾರ ಮಾಡಿದ್ದಲ್ಲದೆ ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಹಿಂದು ಯಾರು? (Who is a Hindu?) ಎಂಬ ಪುಸ್ತಕ ಪ್ರಕಟಿಸಿ ಪ್ರಚಾರ ಸಹ ಮಾಡಿದೆವು.

ಒಂದು ಊರಿನಲ್ಲಿ ಓರ್ವ ಕ್ರೈಸ್ತ ವಿಧವಾ ಮಹಿಳೆ, ಮಿಸೆಸ್ ಜಾನ್ ತನ್ನ ನಾಲ್ಕು ಮಕ್ಕಳ ಸಹಿತ 'ಹಿಂದು' ವಾಗಲು ವಿ.ಹಿಂ.ಪ ಅವರ ಪ್ರಯತ್ನದಿಂದ ಸಿದ್ಧಳಾಗಿದ್ದಳು. ನನ್ನನ್ನೇ ಶುದ್ಧೀಕರಣ ಕ್ರಿಯೆಗೆ ಕರೆದಿದ್ದರು. ಹಿಂದಿನ ದಿನ ಸಂಜೆ ಆಕೆ ಪ್ರಶ್ನಿಸಿದಳು, "ನಾನೊಬ್ಬ ಗೃಹಿಣಿ, ನನಗೆ ಮಕ್ಕಳುಂಟು; ಹಿಂದುಗಳಲ್ಲಿ ಸಹಸ್ರಾರು ಜಾತಿಗಳಿವೆ. ನಾನು ಯಾರ ಜೊತೆ ಸೇರಬೇಕು, ನನ್ನ ಮಕ್ಕಳ ಮದುವೆ ಯಾರೊಡನೆ ಆಗಬೇಕು.?." ವಿ.ಹಿಂ.ಪ ಕಾರ್ಯಕರ್ತರು ಮೌನಿಗಳಾದರು. ಆಗ ಆ ತಾಲ್ಲೋಕಿನ ವಿ.ಹಿಂ.ಪದ ಅಧ್ಯಕ್ಷರಾದ ಶ್ರೀಮಾನ್ ಬಸವರಾಜಪ್ಪನವರು, ಸ್ವಲ್ಪ ವಿಚಾರಶೀಲರು, "ಮಾತಾಜಿ, ತಾವು ಲಿಂಗದೀಕ್ಷೆ ಕೊಡಿರಿ. ನಾವು ನಮ್ಮ ಲಿಂಗಾಯತ ಸಮಾಜದಲ್ಲಿ ಸೇರಿಸಿಕೊಂಡು ಮಕ್ಕಳ ಮದುವೆಗೆ ನೆರವಾಗುತ್ತೇವೆ." ಎಂದು ಹೇಳಿದರು. ಆಗ ವಿ.ಹಿಂ.ಪದ ಇತರೆ(ಕೆಲವು ಬ್ರಾಹ್ಮಣ) ಪದಾಧಿಕಾರಿಗಳು ಹೇಳಿದರು, "ಆಕೆ ಹಿಂದುವಾಗಲಿ ಲಿಂಗಾಯತ ಆಗುವುದು ಬೇಡ." ಎಂದು. ಅಂದರೆ ಇದರ ಅರ್ಥ

ಅವರು ಅಹಿಂದುಗಳು ಎಂದಂತೆ ಆಗದೆ ? ಈ ಪ್ರಸಂಗ ನನ್ನ ಮನಸ್ಸಿನ ಮೇಲೆ ಎಂಥಾ ಆಘಾತವನ್ನು ಉಂಟು ಮಾಡಿತೆಂದರೆ, ವಿಶ್ವ ಹಿಂದೂ ಪರಿಷತ್ ಸಂಬಂಧವನ್ನು ಆಗಿನಿಂದ ನಾವು ತೊರೆದೆವು.

ಸ್ವಲ್ಪ ವಿಚಾರ ಮಾಡಿರಿ; ನಿಮ್ಮ ಹಿಂದು ಧರ್ಮಕ್ಕೆ ಹೊರಗೆ ಹೋಗಲು (ಮತಾಂತರ ಹೊಂದಲು) ಬಾಗಿಲಿವೆ; ಒಳಗೆ ಬರಲು ಬಾಗಿಲು(ದೀಕ್ಷಾ ಸಂಸ್ಕಾರ) ಇಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಬಿಟ್ಟರೆ ಶೂದ್ರರು, ದಲಿತರು, ಮಹಿಳೆಯರಿಗೆ ಧರ್ಮ ಸಂಸ್ಕಾರವೇ ಇಲ್ಲ. ಜಗತ್ತಿನ ಅನೇಕ ಭಾಗಗಳಲ್ಲಿ ಮಾನವ ಸಮಾಜದಲ್ಲಿ ಯಾವುದೇ ಧರ್ಮವಿಲ್ಲದೆ ಕೇವಲ ಬುಡಕಟ್ಟು (tribes) ಬಣ (clans) ಇದ್ದುದರಿಂದ ಮತಾಂತರದ ಅವಕಾಶ ಪಡೆದಿದ್ದ ಕ್ರೈಸ್ತ, ಇಸ್ಲಾಂ ಧರ್ಮಗಳು ಬುಡಕಟ್ಟು, ಬಣಗಳನ್ನು ನಾಶ ಮಾಡುತ್ತ ಹರಡಿದವು. ಭಾರತ ದೇಶದಲ್ಲಿ ಒಂದು ಧರ್ಮ-ಹಿಂದು ಎಂದು ಕರೆಯಬಹುದಾದ ಒಂದು ಸಂಸ್ಕೃತಿ, ಜೀವನ ವಿಧಾನ ಇದ್ದೂ ಸಹ ಕ್ರೈಸ್ತ. ಇಸ್ಲಾಂಗಳು ಬಲಗೊಂಡು ಬೆಳೆದವು. ಕಾರಣ ಯಾರು ? ಮಡಿವಂತ ಪುರೋಹಿತಶಾಹಿ ಮತ್ತು ಜಾತಿಪದ್ಧತಿಯ ಕಹಿ ಫಲವಾದ ಅಸ್ಪೃಶ್ಯತೆ.

ನಾಲ್ಕು ಪ್ರತ್ಯೇಕ ಧರ್ಮಗಳು ಏಕೆ ಹುಟ್ಟಿದವು ?

ಈ ಬಗ್ಗೆ ವಿಶ್ವ ಹಿಂದು ಪರಿಷತ್ ಗಂಭೀರವಾಗಿ ಆಲೋಚಿಸಬೇಕು. ಜೈನ-ಬೌದ್ಧ ಧರ್ಮಗಳು ಆಧ್ಯಾತ್ಮಿಕ ಗುರಿಯೊಡನೆ ಹುಟ್ಟಿದರೂ ಕಾಲಾ ನಂತರದಲ್ಲಿ ಸಾಮಾಜಿಕ ಆಯಾಮ ಪಡೆದು ಸಮಾಜಗಳನ್ನು ರೂಪಿಸಿದವು.

ನವ ಧರ್ಮ ದ್ರಷ್ಟಾರ ಬಸವಣ್ಣನವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಸಾಮಾಜಿಕ, ಧಾರ್ಮಿಕ ಎಲ್ಲ ಸವಲತ್ತುಗಳನ್ನು ಪಡೆದರೂ ಸಹ ಜಾತಿ ಪದ್ಧತಿ, ಅಸ್ಪೃಶ್ಯತೆಯ ಮಹಾನ್‌ರೋಗಗಳು ಈ ದೇಶದ ಕುಷ್ಠರೋಗಗಳಾಗಬಹುದು ಎಂದು ಮನಗಂಡು ದೂರಗಾಮಿ ಆಲೋಚನೆಯಿಂದ ಲಿಂಗದೀಕ್ಷಾ ಸಂಸ್ಕಾರವನ್ನು ಶೂದ್ರರು, ಅಸ್ಪೃಶ್ಯರು, ಮಹಿಳೆಯರಿಗೆ ನೀಡಿ ಇನ್ನೂ ದೊಡ್ಡದಾಗಬಹುದಿದ್ದ ದುರಂತದ ತೀವ್ರತೆಯನ್ನು ಕಡಿಮೆ ಮಾಡಿದರು. ಪೂರ್ಣವಾಗಿ ತಪ್ಪಿಸಬಹುದಿತ್ತು. ಆದರೆ ಕ್ರಾಂತಿಕಾರಿ ಲಿಂಗಾಯತ ಧರ್ಮದ ಮೇಲೆ ಎರಗಿದ ವೈದಿಕ ಪುರೋಹಿತಶಾಹಿ ಶಕ್ತಿಗಳಿಂದ ಈ ಧರ್ಮ-ಸಮಾಜಗಳು ದುರ್ಬಲಗೊಂಡು ಬಸವಾದಿ ಪ್ರಮಥರ ಮೂಲ ಆಶಯವನ್ನು ಮಂಕಾಗಿಸಿದವು, ಸಂಕುಚಿತಗೊಳಿಸಿದವು. ಸಿಖ್ ಧರ್ಮ ಹುಟ್ಟಿದುದು ಏಕೆ? ಗುರು ನಾನಕರು ಆಧ್ಯಾತ್ಮಿಕ ದೃಷ್ಟಿಕೋನದಿಂದ ಭಕ್ತಿ ಪಂಥದ ರೂಪದಲ್ಲಿ ಸಿಖ್ ವಿಚಾರಧಾರೆಯನ್ನು ಆರಂಭಿಸಿದರೂ ಹತ್ತು ಜನ ಗುರುಗಳ ಕೊಡುಗೆಯಿಂದ ವಿಶೇಷವಾಗಿ ಶ್ರೀ ಗುರುಗೋವಿಂದ ಸಿಂಗರಿಂದ ಅದೂ ಸಾಮಾಜಿಕ ಆಯಾಮ ಹೊಂದಿ ಸ್ವತಂತ್ರ ಧರ್ಮವಾಗಿ ತನ್ನದೇ ಆದ ಸಮಾಜವನ್ನು ಪಡೆಯಿತು. ನೀವು ಊಹಿಸಿಕೊಳ್ಳಿರಿ. ಒಂದು ವೇಳೆ ಬಸವಣ್ಣನವರು ಲಿಂಗಾಯತ ಧರ್ಮವನ್ನು, ಗುರು ನಾನಕ-ಗುರುಗೋವಿಂದ ಸಿಂಗ ಅವರು ಸಿಖ್ ಧರ್ಮವನ್ನು ಕೊಡದೆ ಇದ್ದರೆ, ಜೈನ-ಬೌದ್ಧ ಧರ್ಮಗಳು ಹುಟ್ಟದೇ ಇದ್ದರೆ ಕ್ರೈಸ್ತ-ಇಸ್ಲಾಂ ಧರ್ಮಗಳು ಇನ್ನೂ ಯಾವ ಗಾತ್ರದಲ್ಲಿ ಬೆಳೆಯಬಹುದಿತ್ತು ಎಂಬುದನ್ನು. ಬಸವಣ್ಣನವರು ಎಲ್ಲ ಜಾತಿ ಮತ ಪಂಥಗಳವರಿಗೆ ಧರ್ಮ ಸಂಸ್ಕಾರ ಕೊಟ್ಟುದರಿಂದ ಪಡೆದವರು ಕ್ರೈಸ್ತ- ಇಸ್ಲಾಂಗಳಿಗೆ. ಮತಾಂತರಗೊಳ್ಳುವುದು ತಪ್ಪಿತಲ್ಲವೆ? ಎಷ್ಟೋ ಜನ ಶೂದ್ರರು, ದಲಿತರು ಶರಣ ಸಂಸ್ಕೃತಿಯಲ್ಲಿ ಬೆಳೆಯುತ್ತಿದ್ದಾರೆ. ಅವರ ಹೆಸರುಗಳು ನೆಲದ ಸಂಸ್ಕೃತಿಯವು. ಅಂಥವರು ಭಾರತೀಯೇತರ ಧರ್ಮಗಳಿಗೆ ಮತಾಂತರಗೊಳ್ಳಲು ಇಷ್ಟಪಡರು. ಈ ದೃಷ್ಟಿಯಿಂದ ಬೌದ್ಧ ಧರ್ಮ ಸ್ವೀಕರಿಸಿದ ಡಾ||ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಯನ್ನು ಮೆಚ್ಚಬೇಕು. ಅವರಿಗೆ ಹಣ,ಅಂತಸ್ತು,ಹುದ್ದೆ ಎಲ್ಲ ಇದ್ದವು . ಆದರೆ ಧರ್ಮವೊಂದರ ಆಸರೆ ಇರಲಿಲ್ಲ. ಅದಕ್ಕಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಬೌದ್ಧ ಧರ್ಮ ಭಯೋತ್ಪಾದಕರನ್ನು ಹುಟ್ಟು ಹಾಕದ ಶಾಂತಿವಾದಿ ಧರ್ಮವಾಗಿದೆ ಎಂಬುದನ್ನು ಅರಿಯದವರಾರು ?

ಮುಂದೇನಾಗಬೇಕು ?

ಭಾರತದಲ್ಲಿ ಹುಟ್ಟಿರುವ ಜೈನ , ಬೌದ್ಧ, ಲಿಂಗಾಯತ , ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳೆಂದು ವಿಶ್ವ ಹಿಂದೂ ಪರಿಷತ್ ಮಾನ್ಯತೆ ನೀಡಬೇಕು . ಹಿಂದು ಮಾತ್ರ ಒಂದು ಧರ್ಮ, ಉಳಿದ ಈ ನಾಲ್ಕು ಹಿಂದೂದ ಅಂಗ ಎಂಬ ಭ್ರಾಮಕ ಕಲ್ಪನೆ ಬಿಡಬೇಕು . ಧರ್ಮದ ಹಸಿವೆ ಇರುವ ಯಾರೇ ಇರಲಿ ಈ ನಾಲ್ಕರಲ್ಲಿ ಯಾವುದೇ ಒಂದು ಧರ್ಮವನ್ನು ಸ್ವೀಕರಿಸಿದರೂ ನೀವು ಅದನ್ನು ವಿರೋಧಿಸಬಾರದು. ಇಲ್ಲವೇ ನೀವೆ ವರ್ಣ-ಜಾತಿ-ವೃತ್ತಿ ಭೇದ ಮಾಡದೆ ಶೂದ್ರ, ಅಸ್ಪೃಶ್ಯ, ಮಹಿಳೆಯರಿಗೂ ಯಜ್ಞೋಪವೀತ ನೀಡಿ ದ್ವಿಜರನ್ನಾಗಿ ಮಾಡಬೇಕು. ಈ ನಾಲ್ಕು ಧರ್ಮಗಳಲ್ಲಿ ವ್ಯಕ್ತಿ ಯಾವುದೇ ಧರ್ಮವನ್ನು ಸ್ವೀಕರಿಸಿದರೂ ಅವನು ಭಾರತೀಯ ಸಂಸ್ಕೃತಿಗೆ ವಿರೋಧಿಯಾಗನು; ಭಾರತ ವಿರೋಧಿಯೂ ಆಗನು. ಭಾರತೀಯ ಧಾರ್ಮಿಕ ಪರಂಪರೆಯ ಕರುಳ ಬಳ್ಳಿಯನ್ನು ಕತ್ತರಿಸಿಕೊಳ್ಳನು.

ಕ್ರೈಸ್ತರು, ಮುಸಲೀಮರು ಮತಾಂತರ ಮಾಡುತ್ತಾರೆ ಎಂದು ಅವರೊಡನೆ ಜಗಳ ತೆಗೆಯದೆ "ನಾವು ಧರ್ಮ ಸಂಸ್ಕಾರ ಕೊಡಲಿದ್ದೇವೆ. ಬನ್ನಿರಿ." ಎಂದು ನೀವಾದರೂ ಕರೆ ಕೊಡಿರಿ, ಇಲ್ಲವೇ ನಮಗಾದರೂ ಅವಕಾಶ ಕೊಡಿರಿ. "ಭಾರತೀಯ ಮೂಲದ ಧರ್ಮವನ್ನು ಸ್ವೀಕರಿಸಿ" ಎಂದು ದಲಿತರಿಗೆ ವಿಶ್ವ ಹಿಂದು ಪರಿಷತ್ ಕರೆ ಕೊಡಲಿ.

ಭಾರತೀಯ ಧರ್ಮಗಳ ಒಕ್ಕೂಟ

ಭಾರತದ ಅಖಂಡತೆ ಧರ್ಮ-ಸಂಸ್ಕೃತಿಯೊಡನೆ ತಳುಕು ಹಾಕಿಕೊಂಡಿದೆ ಎಂಬುದು ನಮಗೆ ಗೊತ್ತು. ಈ ನಮ್ಮ ಧರ್ಮ ಭೂಮಿ ಬಿಟ್ಟರೆ ನಮಗೆ ಬೇರೆ ನೆಲೆ ಇಲ್ಲ ಎಂಬುದೂ ಗೊತ್ತು. ಆದ್ದರಿಂದ ಇವರ ಸಂರಕ್ಷಣೆಯ ದೃಷ್ಟಿಯಿಂದ ಹಿಂದು, ಬೌದ್ಧ, ಜೈನ, ಲಿಂಗಾಯತ, ಸಿಖ್- ಈ ಐದೂ ಭಾರತೀಯ ಮೂಲದ ಧರ್ಮಗಳ ಒಕ್ಕೂಟವನ್ನು ರಚಿಸುವುದು ಅಗತ್ಯವಿದೆ. ಹೇಗೆ ಸರ್ಕಾರಗಳು ಎನ್.ಡಿ.ಎ, ಯು.ಪಿ.ಎ ಸಮ್ಮಿಶ್ರ ಸರ್ಕಾರಗಳಾಗಿ ಕೆಲಸ ಮಾಡುತ್ತಿವೆಯೋ ಹಾಗೆ ಐದೂ ಸ್ವತಂತ್ರ ಧರ್ಮಗಳ ಒಕ್ಕೂಟವನ್ನು ಭಾರತೀಯ ಧರ್ಮಗಳ ಒಕ್ಕೂಟ Federation of Indian Religions(FIR) ಎಂಬ ಶೀರ್ಷಿಕೆಯಡಿ ರಚಿಸಿ ಸಮನ್ವಯತೆ ಸಾಧಿಸುವುದೊಂದೇ ಏಕೈಕ ಪರಿಹಾರ. ಈ ಸತ್ಯವನ್ನು ಮನಗಾಣದೆ ತನ್ನ ಭ್ರಮೆಯಲ್ಲೇ ತಾನು ಉಳಿದರೆ ವಿಶ್ವ ಹಿಂದೂ ಪರಿಷತ್ ದೇಶಕ್ಕೆ ಅನ್ಯಾಯವನ್ನು ಮಾಡಿದಂತೆ ಆಗುವುದೆಂದು ಕಳಕಳಿಯಿಂದ ಹೇಳಲು ಬಯಸುತ್ತೇವೆ.

30-8-2005 ಹೃತ್ಪೂರ್ವಕ ಶುಭಹಾರೈಕೆಗಳೊಡನೆ
ಬೆಂಗಳೂರು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

★ ★ ★ ★

"ಅಹಿಂದ"ದಲ್ಲಿ 'ಅ' ಬೇಡ-ಪೇಜಾವರ ಶ್ರೀ ಪುನರುಚ್ಚಾರ

ಕಲಬುರ್ಗಿ, ಆ.13-ಹಿಂದುಳಿದವರು ಹಾಗೂ ದಲಿತರ ಸಮಾವೇಶದಲ್ಲಿ ಅಲ್ಪಸಂಖ್ಯಾತರನ್ನು ಸೇರಿಸಿಕೊಳ್ಳುವುದಕ್ಕೆ ತಮ್ಮ ವಿರೋಧವಿದೆ ಎಂದು ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಇಂದಿಲ್ಲಿ ಪುನರುಚ್ಚರಿಸಿ, 'ಅಹಿಂದ'ಬಗ್ಗೆ ವಿವಾದ ಬೆಳೆಸಲು ಇಚ್ಚಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಅಲ್ಪಸಂಖ್ಯಾತರು ಈಗಾಗಲೇ ಸಂಘಟಿತರಾಗಿದ್ದಾರೆ. ಸಂವಿಧಾನದಲ್ಲಿ ಅವರಿಗೆ ವಿಶೇಷ ಸವಲತ್ತು ಇರುವುದರಿಂದ ಅವರು ಸಾಮಾಜಿಕ ನ್ಯಾಯದಿಂದ ವಂಚಿತರೂ ಅಲ್ಲ. ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜದ ಒಂದು ವರ್ಗದೊಂದಿಗೆ ಅಲ್ಪಸಂಖ್ಯಾತರನ್ನು ಮಾತ್ರ ಸೇರಿಸಿ, ಉಳಿದ ಹಿಂದೂಗಳನ್ನು ಹೊರಗಿಡುವುದು ವಿಘಟಕ ರಾಜನೀತಿಯಾಗಿದೆ" ಎಂದು ಶ್ರೀಗಳು ಪತ್ರಿಕಾಗೋಷ್ಠಿಯಲ್ಲಿಂದು ಪ್ರತಿಪಾದಿಸಿದರು.

'ನಮಗೆ ಅಲ್ಪಸಂಖ್ಯಾತರ ಬಗ್ಗೆಯೂ ಸಹಾನುಭೂತಿಯಿದೆ. ಅವರಿಗೆ ಯಾವುದೇ ಅನ್ಯಾಯವಾಗಬಾರದೆಂದು ಬಯಸುತ್ತೇವೆ. ಆದರೆ, ಅಹಿಂದ ಬಗೆಗಿನ ವಿವಾದ ಬೆಳೆಸಲು ಇಷ್ಟಪಡುವುದಿಲ್ಲ. ನನ್ನ ಸಲಹೆಯನ್ನು ಮಾತ್ರ ನೀಡಿದ್ದೇನೆ. ಈ ಸಂಘಟನೆಯಲ್ಲಿ ಅಲ್ಪಸಂಖ್ಯಾತರು ಸೇರಲಿ, ಸೇರದಿರಲಿ ಹಿಂದುಳಿದವರ ಹಾಗೂ ದಲಿತರ ಸಂಘಟನೆಗೆ ಸದಾ ನಮ್ಮ ಬೆಂಬಲವಿದೆ.' ಎಂದು ಅವರು ಹೇಳಿದರು.

ನಾವು ಎಂದಿಗೂ ವಿಘಟಕ ರಾಜನೀತಿ ನಡೆಸುತ್ತಿಲ್ಲ. ಆದರೆ ರಾಷ್ಟ್ರಕ್ಕೆ ಮತ್ತು ಹಿಂದೂ ಧರ್ಮಕ್ಕೆ ವಿರೋಧಿಯಾದ ಘಟನೆಗಳ ವಿರುದ್ಧ ಮಾತ್ರ ಧ್ವನಿ ಎತ್ತುವೆವು. ನಾವೆಲ್ಲರೂ ಭಾರತೀಯರೆಂಬುದನ್ನು ಅರಿತುಕೊಳ್ಳಬೇಕೆಂಬ ಸಿದ್ಧರಾಮಯ್ಯನವರ ಹೇಳಿಕೆಯನ್ನು ಸ್ವಾಗತಿಸುತ್ತೇವೆ. ಹಿಂದುಳಿದವರು ಮತ್ತು ದಲಿತರ ಸಮಾವೇಶದಲ್ಲಿ ಅಲ್ಪಸಂಖ್ಯಾತರನ್ನು ಸೇರಿಸಿಕೊಂಡಿರುವಾಗ, ಉಳಿದ ಶೋಷಿತ ವರ್ಗದವರನ್ನು ದೂರವಿಡುವುದೇಕೆ? ಅವರು ಭಾರತೀಯರಲ್ಲವೇ ? ಎಂದು ಕೇಳಿದ ಶ್ರೀಗಳು, ಸಾಮಾಜಿಕ ನ್ಯಾಯಕ್ಕಾಗಿ ದಲಿತರು ಸಂಘಟಿತರಾಗುವುದು ಸೂಕ್ತವಿದ್ದು, ಅದಕ್ಕೆ ತಮ್ಮ ಪೂರ್ಣ ಬೆಂಬಲವಿದೆ ;ಎಂದು ಸ್ಪಷ್ಟಪಡಿಸಿದರು.

'ಒಂದೋ ಎಲ್ಲ ಭಾರತೀಯರನ್ನು ಒಳಗೊಂಡ ಸಮಾವೇಶಗಳು ನಡೆಯಲಿ, ಇಲ್ಲವೇ ಸಾಮಾಜಿಕ ನ್ಯಾಯಕ್ಕಾಗಿ ಹಿಂದುಳಿದವರು ಹಾಗೂ ದಲಿತರನ್ನು ಮಾತ್ರ ಒಳಗೊಂಡ ಸಮಾವೇಶಗಳಾಗಲಿ. ಆದರೆ, ಹಿಂದುಳಿದ ವರ್ಗಗಳವರನ್ನು ಮತ್ತು ದಲಿತರನ್ನು ಉಳಿದ ಹಿಂದೂಗಳಿಂದ ಪ್ರತ್ಯೇಕಿಸಿ, ಅಲ್ಪಸಂಖ್ಯಾತರ ವಿಘಟನೆಗೊಳಿಸುವ ಚಟುವಟಿಕೆಗಳು ಹಿಂದೂ ಸಮಾಜಕ್ಕೂ, ಭಾರತೀಯತೆಗೂ ಪ್ರತಿಕೂಲವಾಗಿವೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು' ಎಂದು ಅವರು ಹೇಳಿದರು.

ಬ್ರಾಹ್ಮಣರು, ವೀರಶೈವರು, ಒಕ್ಕಲಿಗರು ಸೇರಿದಂತೆ ಎಲ್ಲ ಜಾತಿ, ಧರ್ಮಗಳಲ್ಲೂ ಹಿಂದುಳಿದವರು, ಬಡವರು ಹಾಗೂ ಶೋಷಿತರಿದ್ದಾರೆ. ಅವರೆಲ್ಲರನ್ನೂ ಉದ್ಧರಿಸಬೇಕೆಂಬುದೇ ತಮ್ಮ ಸದಾಶಯ. ಇದು ಬಿಟ್ಟರೆ ಬೇರೆ ಯಾವುದೇ ಉದ್ದೇಶ ತಮಗಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸಂಯುಕ್ತ ಕರ್ನಾಟಕ 14-8-2005, ಪುಟ-8

ಪೂಜ್ಯ ಪೇಜಾವರ ಶ್ರೀಗಳ ಅಭಿಪ್ರಾಯ ಅತ್ಯಂತ ಸೂಕ್ತ

ಹಿಂದು ಸಮಾಜದ ಆಗುಹೋಗುಗಳಿಗೆ ತಕ್ಷಣವೇ ಸ್ಪಂದಿಸುವ ಮತ್ತು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ -ಅದು ಸರಿ ಇರಲಿ, ತಪ್ಪಿರಲಿ, ಹೇಳುವ ಕಳ ಕಳಿ, ಧೈರ್ಯ ಇರುವವರು ಪೂಜ್ಯ ಪೇಜಾವರ ಮಠಾಧೀಶರೊಬ್ಬರೆ. ಅವರ ಉದ್ದೇಶ, ಅಪೇಕ್ಷೆ ಉದಾತ್ತವಾಗಿದೆ. ಆದರೆ ವೈದಿಕ-ಹಿಂದು ಮಾರ್ಗಿಗಳೆಲ್ಲರೂ ಸಂದಿಗ್ಧತೆಯಲ್ಲಿ ಅನಿವಾರ್ಯವಾಗಿ ಸಿಕ್ಕಿಕೊಳ್ಳುವುದರಿಂದ ಅವರ ಮಾರ್ಗವು ಬಹಳ ಅಸ್ಪಷ್ಟವಾಗಿರುತ್ತದೆ. ದಲಿತರ ಕೇರಿಗೆ ಹೋಗಿ ಬರುವ ವಿಷಯದಲ್ಲಿಯೂ ಶ್ರೀಗಳು ಉಳಿದ ಬ್ರಾಹ್ಮಣ ಮಠಾಧೀಶರಿಗಿಂತ ಪ್ರಗತಿಪರ ಚಿಂತನೆ ಉಳ್ಳವರಾಗಿದ್ದಾರೆ. ಹಿಂದು ಸಮಾಜದ ಒಗ್ಗಟ್ಟು, ಪ್ರಗತಿ ಬಗ್ಗೆ ಶ್ರೀಗಳಿಗೆ ಪ್ರಾಮಾಣಿಕ ಕಾಳಜಿ ಇದೆ. ಆದರೆ..........

ಉಡುಪಿಯಲ್ಲಿ 1979ರಲ್ಲಿ ವಿಶ್ವ ಹಿಂದು ಪರಿಷತ್‌ನ ವಿರಾಟ್ ಸಮ್ಮೇಳನ ನಡೆದಾಗ ನಾನು ವೇದಿಕೆಯ ಮೇಲೆ ಒಂದು ಮಾತು ಹೇಳಿದೆ, "ಹಿಂದು ಸಮಾಜದಿಂದ ಮತಾಂತರಗೊಂಡು ದಲಿತರು, ಶೂದ್ರರು ಹೊರಗೆ ಹೋಗಬಾರದೆಂಬ ಕಳ ಕಳಿ ಇದ್ದರೆ ಪ್ರತಿಯೊಬ್ಬ ಹಿಂದು ಮಠಾಧೀಶರೂ ಪ್ರತಿಯೊಬ್ಬ ಹಿಂದುವಿಗೆ ಒಂದು ಕಾಳು ರುದ್ರಾಕ್ಷಿಯನ್ನಾದರೂ ಧರಿಸಿ, ಒಂದು ಮಂತ್ರದ ಉಪದೇಶ ಮಾಡಬೇಕು. ಒಂದು ಮನೆಯಲ್ಲಿ ಬೆಳೆದಿರುವ ಕನ್ಯೆಗೆ ಮಾಂಗಲ್ಯ ಧರಿಸಿ ವ್ಯಕ್ತಿಯು ತನ್ನವಳನ್ನಾಗಿ ಮಾಡಿಕೊಳ್ಳುತ್ತಾನೆ. ಆವರೆಗೆ ನನ್ನದು ಎಂದು ಅನ್ನುತ್ತಿದ್ದ ಉಭಯತರು ನಮ್ಮದು ಎನುತ್ತಾರೆ. ಶೂದ್ರರು, ದಲಿತರಿಗೆ ಯಾವ ಧರ್ಮ ಸಂಸ್ಕಾರವೂ ಇಲ್ಲ. ಹೀಗಾಗಿ ನಮಗೆ ಹಿಂದು ಧರ್ಮ ಏನು ಕೊಟ್ಟಿದೆ ಎಂದು ಅವರು ಕೇಳುತ್ತಾರೆ. ಮಂತ್ರೋಪದೇಶ ಮಾಡುವ ಕ್ರಿಯೆ ಆಚರಣೆಗೆ ಬರಬೇಕು." ಎಂದೆ. ನನ್ನ ಈ ಅಭಿಪ್ರಾಯಕ್ಕೆ ಉತ್ತಮವಾದ ಪ್ರತಿಕ್ರಿಯೆ ಬಂದಿತು. ಆದರೆ ಕಾರ್ಯವನ್ನು ಬೇರಾರೂ ಮುಂದುವರಿಸಲಿಲ್ಲ. ನಾವಂತೂ ಮಾಡುತ್ತಲೇ ಬಂದಿದ್ದೇವೆ.

ಪೂಜ್ಯ ಪೇಜಾವರ ಶ್ರೀಗಳು ಆದಿಯಾಗಿ ವಿ.ಹಿಂ.ಪ, ಆರ್.ಎಸ್.ಎಸ್ ಇವರೆಲ್ಲರು ಒಂದು ಬಗೆಯ ನಿರ್ಬಂಧಕ್ಕೆ ಒಳಗಾಗುತ್ತಾರೆ. ವೇದ, ಶೃತಿ, ಸ್ಮೃತಿಯನ್ನು ಉಲ್ಲಂಘಿಸುವ ಧೈರ್ಯವನ್ನು ಅವರು ತಳೆಯುವುದು ಕಷ್ಟ. ರೂಢಿಗೊಂಡಿರುವ ವ್ಯವಸ್ಥೆಯನ್ನು ಅವರು ಪೋಷಿಸಬಲ್ಲರು, ರಕ್ಷಿಸಬಲ್ಲರು, ಸುಧಾರಿಸುವ ಅವಕಾಶದಿಂದ ಅವರು ವಂಚಿತರು. ಇವರ ಈ ನಿಸ್ಸಹಾಯಕತೆ ನೋಡಿಯೇ ನಾವು, "ಲಿಂಗಾಯತರು ಹಿಂದುಗಳಲ್ಲ, ಲಿಂಗಾಯತವು ಹಿಂದು ಧರ್ಮದ ಅಂಗವಲ್ಲ; ಸ್ವತಂತ್ರ ಧರ್ಮ. ಯಾರಿಗೆ ಬೇಕಾದರೂ ದೀಕ್ಷೆ ನೀಡುವ ಮನೋಭಾವ ಹೊಂದಿದೆ." ಎಂದು ಘೋಷಿಸಿಕೊಳ್ಳಬೇಕಾಯಿತು. ಈ ಕಠಿಣ ಮತ್ತು ದೃಢ ನಿರ್ಧಾರದ ಹಿಂದೆ ನಮಗೆ ಹಿಂದು ವಿರೋಧಿ ಮನೋಭಾವವಿಲ್ಲ; ದೇಶೀಯ ಸಂಸ್ಕೃತಿ -ಪರಂಪರೆಯನ್ನು ರಕ್ಷಿಸುವ ಕಳಕಳಿ ಇದೆ. ಒಂದು ಪರಮ ಸತ್ಯವನ್ನು ಪ್ರತಿಪಾದಿಸುವ ತುಡಿತವಿದೆ.

ಮಾಜಿ ಉಪಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು 'ಅಹಿಂದ'ರ ಅಂದರೆ ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು ಮತ್ತು ದಲಿತರ ಸಮಾವೇಶ ಮಾಡುವುದರಲ್ಲಿ ಬಹಳ ಉತ್ಸುಕರಾಗಿದ್ದಾರೆ. ಈ ಹೆಸರಿನ ಸಂಘಟನೆ ಮೊದಲೇ ಪ್ರಾರಂಭವಾಗಿದೆ. ಈಗ ಅದಕ್ಕೆ ರಾಜಕೀಯ ಸ್ಪರ್ಶ ದೊರೆತಿದೆ. ಪೂಜ್ಯ ಶ್ರೀ ಪೇಜಾವರ ಶ್ರೀಗಳು "ಹಿಂದುಳಿದವರು ಹಾಗೂ ದಲಿತರ ಸಮಾವೇಶದಲ್ಲಿ ಅಲ್ಪ ಸಂಖ್ಯಾತರನ್ನು ಸೇರಿಸಿಕೊಳ್ಳುವುದಕ್ಕೆ ನಮ್ಮ ವಿರೋಧವಿದೆ." ಎಂದು ಹೇಳಿದ್ದಾರೆ. (ಸಯುಂಕ್ತ ಕರ್ನಾಟಕ. ದಿ.14-8-2005 ಪುಟ.8) ಒಂದು ರೀತಿಯಲ್ಲಿ ಈ ಅಭಿಪ್ರಾಯ ಸರಿ.

ಹಿಂದುಳಿದ ವರ್ಗದವರು ಮತ್ತು ದಲಿತರು ಹಿಂದು ಸಮಾಜದ ಅಂಗ. ಚತುರ್ವರ್ಣಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ದ್ವಿಜರು. ಶೂದ್ರರು ನಾಲ್ಕನೆಯ ವರ್ಣ, ಇವರಿಗೆ ದ್ವಿಜ ಸಂಸ್ಕಾರ ದೊರೆಯದು. ದಲಿತರು ಪಂಚಮರು ಅವರಿಗೆ ದ್ವಿಜ ಸಂಸ್ಕಾರ ದೊರೆಯುವುದಿರಲಿ ಪರಸ್ಪರ ಮುಟ್ಟುವ, ಒಡನಾಡುವ ಸೌಲಭ್ಯದಿಂದ ಸಹ ವಂಚಿತರಾದವರು. ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳು ತಮ್ಮ ಧರ್ಮ-ಸಮಾಜಗಳನ್ನು ಬೆಳೆಸಲು ಆಸೆಗಣ್ಣಿನಿಂದ ನೋಡುವುದು ಇವರತ್ತಲೆ. ಶೂದ್ರರಿಗೆ ಧರ್ಮ ಸಂಸ್ಕಾರ ಇಲ್ಲದೆ ಇದ್ದರೂ ಅವರನ್ನು ಮುಟ್ಟಿಸಿಕೊಳ್ಳಲು ಸವರ್ಣೀಯ ಹಿಂದುಗಳು ಹಿಂಜರಿಯುವುದಿಲ್ಲವಾದ್ದರಿಂದ ಅಸ್ಪೃಶ್ಯತೆಯ ಕಹಿ ಫಲವನ್ನು ಶೂದ್ರರು ತಿನ್ನುವ ನಿರ್ಬಂಧವಿಲ್ಲ. ಪ್ರೀತಿ, ಮದುವೆ, ಪರಿಸರದ ಪ್ರಭಾವ, ಆಂಗ್ಲ ಶಿಕ್ಷಣದ ಪರಿಣಾಮದಿಂದ ಸವರ್ಣೀಯ ಹಿಂದುಗಳು ಮತಾಂತರ ಹೊಂದಿರಬಹುದು; ಮತ್ತೆ ಕೆಲವು ಕಡೆ ಭಯೋತ್ಪಾದಕರ ಬಂದೂಕಿನ ನಳಿಕೆಗೆ ಹೆದರಿ ಕೆಲವು ಸವರ್ಣೀಯರು ಮತಾಂತರ ಹೊಂದಿರಬಹುದು. ಉದಾಹರಣೆಗೆ ಕಾಶ್ಮೀರದಲ್ಲಿರುವ ಅನೇಕ ಮುಸ್ಲೀಮರ ಅಡ್ಡ ಹೆಸರು ಬ್ರಾಹ್ಮಣರವಾಗಿವೆ. ಮತಾಂತರಿಸುವ ವಿದೇಶಿ ಧರ್ಮಗಳಿಗೆ ಮುಖ್ಯ ಆಹಾರ ದಲಿತ ಮೂಲದವರು.

"ಅಹಿಂದ"ದಲ್ಲಿ ಹಿಂದುಳಿದ ವರ್ಗದಲ್ಲಿರುವ ಶೂದ್ರ ಹಿಂದುಗಳು, ದಲಿತ ಹಿಂದುಗಳು ಎಂಬ ಸಮುದಾಯಗಳಿವೆ. ಇವರನ್ನು ಮೇಲೆತ್ತಬೇಕು; ಶಿಕ್ಷಣ ನೀಡಬೇಕು. ಅವರು ಸ್ವಾಭಿಮಾನದ ಬದುಕು ಬದುಕುವಂತೆ ಮಾಡಬೇಕು. ಬಹುಶಃ ಇದೇ ಶ್ರೀ ಸಿದ್ಧರಾಮಯ್ಯನವರು ಮತ್ತು ಅವರ ಸಂಗಡಿಗರ

ಉದ್ದೇಶವಾಗಿರಬಹುದು. ಒಂದು ವೇಳೆ ರಾಜಕೀಯಕ್ಕೆ ಹೊರತಾಗಿ ಹಿಂ, ದ ದವರ ಸರ್ವಾಂಗೀಣ ಏಳಿಗೆಯೇ ಉದ್ದೇಶವಾಗಿದ್ದರೆ. ಆಗ ಅವರು ಶ್ರೀ ಪೇಜಾವರ ಸ್ವಾಮಿಗಳು ಹೇಳಿದಂತೆ ಅಲ್ಪಸಂಖ್ಯಾತರನ್ನು ಸೇರಿಸಿಕೊಳ್ಳುವುದು ಅಗತ್ಯವಿಲ್ಲ. ಏಕೆಂದರೆ ಇಡೀ ಜಗತ್ತೇ ಬೆರಗಾಗುವಂತೆ, ಭಯಪಡುವಂತೆ ಇಸ್ಲಾಂ ಮತ್ತು ಕ್ರೈಸ್ತ ಸಮುದಾಯದವರು ಸಂಘಟಿತರಾಗಿದ್ದಾರೆ, ಜಾಗೃತರಾಗಿದ್ದಾರೆ. ಅವರಿಗೆ ಧರ್ಮ ಸಂಸ್ಕಾರ ಸಿಕ್ಕಿದೆ. ಅವರು ಈಗ ಕುರುಬನ ರಕ್ಷಣೆಯಲ್ಲಿರುವ ಕುರಿಗಳಂತೆ (ಕ್ರೈಸ್ತ ಧರ್ಮ ಉಪಮೆ) ವ್ಯವಸ್ಥಿತವಾಗಿ ಮಸೀದಿ, ಚರ್ಚು ಕಟ್ಟಿಕೊಂಡಿದ್ದಾರೆ. ದೀಕ್ಷೆ ಪಡೆಯುತ್ತಾರೆ, ಪ್ರಾರ್ಥನೆಗೆ ಸೇರುತ್ತಾರೆ. ಕುರುಬನಿಲ್ಲದ ಕುರಿಗಳಂತೆ ಅಸಂಘಟಿತರಾಗಿರುವವರು ಹಿಂದುಳಿದ ವರ್ಗದವರು ಮತ್ತು ದಲಿತರು. ರಾಜಕಾರಣದಲ್ಲಿ ಕೆಲವರು ಮೇಲೆ ಬಂದು ಗುಡುಗಿದ ಮಾತ್ರಕ್ಕೆ, ದಿನ ನಿತ್ಯವೂ ದಲಿತ ಸಂಘಟನೆಗಳ ಫೋಟೋಗಳು ಪತ್ರಿಕೆಗಳಲ್ಲಿ ಬಂದ ಮಾತ್ರ ಆ ಜನರು ಸಂಘಟಿತರಾಗಿದ್ದಾರೆಂದು ಅರ್ಥವಲ್ಲ. ಅಜ್ಞಾನ, ಅನಕ್ಷರತೆ, ಶೋಷಣೆ, ಬಡತನ, ದುಶ್ಚಟ, ಮೂಢ ನಂಬಿಕೆ ಅವರನ್ನು ತುಳಿದು ಹಾಕುತಿವೆ.

ಇನ್ನು ಸಿದ್ಧರಾಮಯ್ಯನವರದು ಮತ್ತು ಅಹಿಂದ ಸಂಘಟನೆಯವರದ್ದು ರಾಜಕೀಯ ಉದ್ದೇಶವೇ ಇದ್ದರೆ ಆಗ ಬೇರೊಂದು ದಿಶೆಯಲ್ಲಿ ನಾವು-ನೀವು ಎಲ್ಲರೂ ಚಿಂತಿಸಿಬೇಕು. ಒಂದನೆಯದಾಗಿ ಎಲ್ಲ ಜಾತಿ-ಜನಾಂಗದವರೂ ವಿವಿಧ ಪಕ್ಷಗಳಲ್ಲಿ ಹರಿದು ಹಂಚಿ ಹೋಗಿದ್ದಾರೆ. ಯಾರೊಬ್ಬರಿಗೂ ತಮ್ಮ ಸಮುದಾಯದ ಹಿತ ಬೇಕಾಗಿಲ್ಲ. ಮಠಗಳವರಿಗೇ ಬೇಕಾಗಿಲ್ಲ ಎಂದರೆ ಇನ್ನು ರಾಜಕಾರಣಿಗಳಿಗೆ ಎಷ್ಟರ ಮಟ್ಟಿಗೆ ಬೇಕಾದೀತು ? ಜಾತಿ ಅಭಿಮಾನದ ನಿಚ್ಚಣಿಕೆ ಏರಿ ಮೇಲೆ ಬಂದವರು ಸಹ ನಂತರ ಆ ನಿಚ್ಚಣಿಕೆಯನ್ನು ಒದೆದು ಬಿಡುವರು, ತಮ್ಮ ಸ್ವಾರ್ಥದ ಸಾಧನೆಗಾಗಿ ಶ್ರಮಿಸುವರು. ಸಿದ್ಧರಾಮಯ್ಯನವರು ಒಬ್ಬರನ್ನು ಹಿಡಿದುಕೊಂಡು ಇನ್ನೊಬ್ಬರ ಜೊತೆಗಿನ ಸಂಬಂಧ ಕೆಡಿಸಿಕೊಳ್ಳುವುದು ಸರಿಯಲ್ಲ. ಇಂದು ದೇಶದ ದೃಷ್ಟಿಯಿಂದ ಒಡೆಯುವ ಕೆಲಸ ಬಿಟ್ಟು ಒಂದು ಗೂಡಿಸುವ ಕೆಲಸ ಮಾಡಬೇಕು.

ಲಿಂಗಾಯತ ಧರ್ಮ ಸ್ವತಂತ್ರ ಹಾಗೂ ಪ್ರತ್ಯೇಕ ಧರ್ಮ ಎಂದು ಘೋಷಿಸುವ ನಮ್ಮ ಪ್ರಯತ್ನದಲ್ಲಿ ಯಾರನ್ನೂ ಎತ್ತಿ ಕಟ್ಟುವ ಒಡೆಯುವ ಉದ್ದೇಶವಿಲ್ಲ. ಓರ್ವ ಚಿಂತನಶೀಲ ದಲಿತನಾಯಕರು ಹೇಳಿದರು, "ಲಿಂಗಾಯತ ಧರ್ಮ ಸ್ವತಂತ್ರ ಧರ್ಮ; ಭಾರತ ದೇಶದಲ್ಲಿದೆ. ನಮ್ಮನ್ನು ಸ್ವೀಕರಿಸಲು ಸಿದ್ಧವಾಗಿದೆ." ಎಂಬ ಜಾಗೃತಿ ಇಂದು ಅವಶ್ಯವಿದೆ. ಏಕೆಂದರೆ, ನಮಗೆ ಧರ್ಮವೊಂದರ ಸಂಸ್ಕಾರ ಬೇಕಾಗಿದೆ. ವೈದಿಕ ಧರ್ಮ ಕೊಡುವುದಿಲ್ಲ; ಜೈನ ಧರ್ಮ ಶ್ರೀಮಂತರ, ಮೇಲ್ಜಾತಿಯವರ ಧರ್ಮವಾಗಿದೆ. ಸಿಖ್ ಧರ್ಮ ಉತ್ತರದಲ್ಲಿ ಪ್ರಭಾವಶಾಲಿಯಾಗಿ ಬೆಳೆದಿದೆ. ಬೌದ್ಧ ಧರ್ಮ ಭಾರತದಲ್ಲಿ ಹುಟ್ಟಿದ್ದರೂ ಹೊರಗೆ ಹೋಗಿ ಟಿಬೆಟ್ ಮೂಲದಿಂದ ಬಂದಿರುವುದರಿಂದ ಒಂದು ರೀತಿ ವಿದೇಶಿ ಧರ್ಮವಾಗಿದೆ. ಅವರುಗಳು ಈ ನೆಲದವರಾದ ನಮ್ಮನ್ನು-ಕಪ್ಪು ಜನರನ್ನು ಸೇರಿಸಿಕೊಳ್ಳುವುದೇ ಇಲ್ಲ (ಇದನ್ನು ನೀವು ಟಿಬೆಟಿಯನ್ ಕ್ಯಾಂಪ್ ಇರುವ ಮುಂಡಗೋಡದಲ್ಲಿ ಪ್ರತ್ಯಕ್ಷವಾಗಿ ಅನುಭವಿಸಬಹುದು) ನಮ್ಮ ಸಾಂಸ್ಕೃತಿಕ ಪರಂಪರೆ ಶರಣ ಸಂಸ್ಕೃತಿಯದಾಗಿ ಈ ನೆಲದೊಡನೆ ಬೆರೆತುಕೊಂಡಿದೆ." ನಿಜ, ಅವರ ಮಾತು ನೂರಕ್ಕೆ ನೂರು ಸತ್ಯ. ಶೂದ್ರ ಮತ್ತು ದಲಿತರ ಮನೆಗಳಲ್ಲಿ ಬಸಪ್ಪ, ನೀಲಮ್ಮ, ಶರಣಪ್ಪ, ಶರಣಮ್ಮ, ಚನ್ನಪ್ಪ, ಚನ್ನಬಸಪ್ಪ ಸಿದ್ಧರಾಮ, ಬಸವೇಗೌಡ, ರೇವಣ್ಣ ಮುಂತಾದ ಹೆಸರು ಅತ್ಯಂತ ಸ್ವಾಭಾವಿಕ.

ಆದ್ದರಿಂದ ಇಂದಿನ ಅಗತ್ಯವೇನೆಂಬುದನ್ನು ಎಲ್ಲರೂ ಚಿಂತಿಸಬೇಕಾಗಿದೆ. ಸತ್ಯವು ಕಹಿಯಾಗಿದ್ದರೂ ಅದನ್ನು ವಿ.ಹಿಂ.ಪ, ಪೇಜಾವರ ಶ್ರೀಗಳು, ಆರ್.ಎಸ್.ಎಸ್ ಅರಿಯಲೇ ಬೇಕು. ಉಷ್ಟ್ರ ಪಕ್ಷಿಯಂತೆ ಪೊದೆಯಲ್ಲಿ ಮುಖವನ್ನಷ್ಟೆ ಮುಚ್ಚಿಕೊಂಡು ಬೃಹತ್ ಶರೀರವನ್ನು ಹೊರಗೇ ಇಟ್ಟು ಶತ್ರುವಿನಿಂದ ಪಾರಾದೆ ಎಂದು ಸಮಾಧಾನ ಪಡುವುದರಲ್ಲಿ ಅರ್ಥವಿಲ್ಲ. ಹಾಗೆಯೆ ಶ್ರೀ ಸಿದ್ಧರಾಮಯ್ಯನವರು, ಅವರ ಸಂಗಡಿಗರು ತಾತ್ಕಾಲಿಕ (ಅಧಿಕಾರ ಹೊಂದುವ) ಸುಖಕ್ಕಾಗಿ (ಸವರ್ಣೀಯ) ಹಿಂದು ಸಮಾಜದ ವಿರುದ್ಧ ಅ, ಹಿಂ, ದರನ್ನು ಎತ್ತಿ ಕಟ್ಟುವುದೂ ಬೇಡ.

ನಮಗೆ ಅನ್ನಿಸುತ್ತದೆ ಹಂದೆಯ ಕೈಯಲ್ಲ ಚಂದ್ರಾಯುಧವಿದ್ದಂತೆ ಲಿಂಗಾಯತರ ಬಳಿಯಿರುವ ಲಿಂಗಾಯತ ಧರ್ಮ ಶೂರನ ಕೈಯಲ್ಲಿ ಇರುವ ಮೊಂಡು ಕತ್ತಿಯಂತೆ ಆರ್. ಎಸ್.ಎಸ್ ಬಳಿಯಿರುವ ವೈದಿಕ ಧರ್ಮ; ಹೃದಯ ಪರಿವರ್ತನೆ ಮಾಡಿಕೊಂಡು ಆರ್.ಎಸ್.ಎಸ್. ಪ್ರಗತಿಪರ ಚಿಂತನೆಯ ಬಸವ ತತ್ತ್ವದ ಆಯುಧ ಎತ್ತಿಕೊಂಡು ಹೋರಾಡಲಿ. ಅದರಲ್ಲೇ ಹಿಂದೂ ಸಮಾಜದ ಶ್ರೇಯಸ್ಸು ಇದೆ.

ಬಸವ ತತ್ತ್ವ ಪಸರಿಸಿದ ಧೀಮಂತ ಯೋಗಿ

[ಶರಣೆ ರತ್ನಕ್ಕ ಅವರು ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಕೊನೆಯ ತಂಗಿ. ಬಳ್ಳಾರಿ ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರಾಗಿರುವ ಇವರು ಪೂಜ್ಯ ಅಪ್ಪಾಜಿಯವರ ಪರಿಚಯವನ್ನು ತಾವು ಕಂಡಂತೆ ಮಾಡಿಕೊಡುತ್ತಿದ್ದಾರೆ.]

ಪೂಜ್ಯ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ಹುಟ್ಟು ಹಬ್ಬಕ್ಕೆ ನನ್ನದೇ ಆದ ನುಡಿ ಕಾಣಿಕೆ ಕೊಡಬೇಕೆಂದು ಮನ ತವಕ ಪಡುತ್ತದೆ. ಏನು ಬರೆಯಬೇಕು? ಅವರ ದಿವ್ಯ ವ್ಯಕ್ತಿತ್ವವೆ? ಅವರ ತ್ಯಾಗ ಜೀವನವೆ? ಅವರಲ್ಲಿರುವ ಮಾನವೀಯ ಗುಣಗಳೆ? ಧರ್ಮಪಿತ ಬಸವಣ್ಣನವರು ಪ್ರೇರೇಪಿಸುತ್ತಾರೆ, ಹಾಗೇ ಬರೆದರಾಯಿತೆಂದು ಕುಳಿತೆ.

ಬಿಜಾಪುರ ಜಿಲ್ಲೆ ಮನುಗೂಳಿಯ ಮಾಣಿಕ್ಯವಾಗಿ. ಶರಣ ದಂಪತಿಗಳಾದ ಮಲ್ಲಪ್ಪ, ಕಲ್ಲಮ್ಮ ಇವರ ಸುಪುತ್ರರಾಗಿ ಜನಿಸಿ, ಬಿದಿಗೆಯ ಚಂದ್ರಮನಂತೆ ಬೆಳೆದು ತಂದೆ, ತಾಯಿಯರ ಮನ ತಣಿಸಿದರು. ಬೆಳೆವ ಪೈರು ಮೊಳಕೆಯಲ್ಲಿಯೇ ನೋಡು ಎಂಬಂತೆ ಸಂಗಮೇಶ ಆಟ, ಪಾಠ, ಈಜು, ಎಲ್ಲದರಲ್ಲಿಯೂ ಮೇಲು, ಸ್ಪರ್ಧಾತ್ಮಕ ಭಾವನೆ. ಒಂದು ಸಲ ಬ್ರಾಹ್ಮಣ ಸ್ನೇಹಿತರು ತುಪ್ಪ ತಿನ್ನುವ ತಲೆ ನಮ್ಮದು; ಓದಿನಲ್ಲಿ ನಮ್ಮನ್ನು ಸೋಲಿಸುವುದು ಸಾಧ್ಯವಿಲ್ಲವೆಂದಾಗ ಛಲ. ಯಾವುದು ಸಾಧ್ಯವಿಲ್ಲವೋ ಅದನ್ನು ಮಾಡಿ ತೋರಿಸಿದಾಗಲೇ ಸಮಾಧಾನ; ಈ ರೀತಿ ಮನದಲ್ಲಿ ಮೂಡಿದ ಭಾವನೆಗಳನ್ನು ಕಾರ್ಯಗತ ಮಾಡಿ ತೋರಿಸುವ ದಿಟ್ಟ ನಿಲವು. ಓದಿ ಏನಾದರೂ ಸಾಧಿಸುವ ಛಲ. ಯಾವಾಗಲೂ ಹೊಸ ಹೊಸ ಪುಸ್ತಕಗಳನ್ನು ಓದುವುದು, ಚಿಂತನೆ ಮಾಡುವುದು, ಸಂಗ್ರಹಿಸುವುದು ಒಂದು ಹವ್ಯಾಸವಾಗಿತ್ತು. ಓದಿದ್ದನ್ನು ತಲೆಯಲ್ಲಿ ತುಂಬಿಕೊಂಡು ಸಾಹಿತ್ಯ ಸರಸ್ವತಿಯ ಮಗನಾಗಿ ಪಾಯಿಧಾನ ಸುಗ್ರಂಥ ಮಾಲೆ ಎಂಬ ಗ್ರಂಥ ಭಂಡಾರವನ್ನೇ ತೆಗೆದರು.

ಒಂದು ಸಲ ರಜಕ್ಕೆ ಮನುಗೂಳಿಗೆ ಬಂದಾಗ, ನಾನು ಇನ್ನೂ ತುಂಬಾ ಚಿಕ್ಕವಳು ನನಗೆ ಅವರ ಮಾತುಗಳು ನೆನಪಿಲ್ಲ. ದೊಡ್ಡವರ-ತಂದೆ ತಾಯಿಯ ಮುಂದೆ ಹೇಳದೆ ನನ್ನ ಮುಂದೆ ಹೇಳುತ್ತಿದ್ದರಂತೆ. ಅವರ ಮುಂದಿನ ಜೀವನದ ಕಲ್ಪನೆ ಮಾಡಿಕೊಂಡು ಹೇಳುತ್ತಿದ್ದರು. ತಂದೆ ತಾಯಿಗಳು ಮಗನ ಪ್ರತಿಭೆ ನೋಡಿ ಹಿಗ್ಗಿದರು. ಆ ಸಂತೋಷ ಬಹಳ ದಿನ ಉಳಿಯಲಿಲ್ಲ. ಏಕೆಂದರೆ ಮಗ ತಮ್ಮನ್ನು ಜೋಪಾನ ಮಾಡುತ್ತಾನೆ. ದೊಡ್ಡ ಕೆಲಸದಲ್ಲಿ ಇರುತ್ತಾನೆ. ಎಂದು ಆಸೆ ಇಟ್ಟುಕೊಂಡ ತಂದೆ ತಾಯಿಗೆ ಮಗನು ಕಾವಿ ವಸ್ತ್ರ ಧರಿಸಿಕೊಂಡ ವಿಷಯ ತಿಳಿದು ಆಘಾತವಾಯಿತು. ಚೇತರಿಸಿಕೊಳ್ಳದೆ ಅವರು ಲಿಂಗೈಕ್ಯರಾದರು. ಬಡತನದಲ್ಲಿ ಇದ್ದ ದೊಡ್ಡ ಕುಟುಂಬವ ತಂದೆ ತಾಯಿಯನ್ನು ಕಳೆದುಕೊಂಡು ಕಂಗಾಲಾಯಿತು. ಬಸವಣ್ಣನವರ ದಯೆಯಿಂದ ಚೇತರಿಸಿಕೊಂಡು ಈಗ ಎಲ್ಲರೂ ಒಳ್ಳೆಯ ಸ್ಥಾನ ಮಾನದಲ್ಲಿದ್ದಾರೆ.

ಮೊದಲು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದರೆ ತಪಸ್ಸೆಂಬ ಸಾಧನೆ ಬೇಕಲ್ಲ; ತಪಸ್ ಶಕ್ತಿಯನ್ನು ಗಳಿಸಿಕೊಂಡರು. ಧರ್ಮಪ್ರಚಾರಕ್ಕೆ ಆರಿಸಿಕೊಂಡಂಥ ತಮ್ಮ ಕರುಣೆಯ ಕಂದನಲ್ಲಿ. ಬಸವಣ್ಣನವರ ದಿವ್ಯ ಕರುಣೆ ನರನಾಡಿಗಳಲ್ಲಿ ಹರಿದು ಅಮೋಘವಾಣಿ ಅವರ ನಾಲಿಗೆಯ ಮೇಲೆ ನಲಿದಾಡತೊಡಗಿದವು. ಜನರಿಗೆ ಯಾವ ರೀತಿ ತತ್ತ್ವ ಬೋಧೆ ಮಾಡಬೇಕು. ಜನರ ಮೇಲೆ ಬಸವ ಧರ್ಮದ ಪ್ರಭಾವ ಬೀರಬೇಕು ಎಂಬುದು. ಅದರಲ್ಲಿ ತತ್ತ್ವ, ಕಥೆ, ಹಾಸ್ಯ, ನೀತಿ ಧಾರ್ಮಿಕತೆ ಎಲ್ಲವೂ ಬರುವಂತೆ ಮಾಡಿ "ವಿಶ್ವಧರ್ಮ ಪ್ರವಚನ" ಎಂದು ಹೇಳಿ ಜನರ ಮನಗಳನ್ನು ಗೆದ್ದು ಪ್ರವಚನ ಮಾಡುತ್ತಾ "ಪ್ರವಚನ ಪಿತಾಮಹ"ರಾದರು. ಸನ್ಯಾಸಿಗಳನ್ನು ಯಾರೂ ಮಾಡಬಾರದು; ಸ್ವತಃ ಅವರೇ ಸನ್ಯಾಸಿಗಳಾಗಬೇಕೆಂದು ದಿಟ್ಟ ನಿಲುವಿನ ಧೀಮಂತ ಯೋಗಿಗಳಾದರು. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಚರ ಜಂಗಮರಾಗಿ ತಿರುಗಿ ನಿತ್ಯ ಜ್ಞಾನ ದಾಸೋಹಿಗಳಾಗಿ ಹರಿಯುವ ನದಿಯಂತೆ ಸದಾ ಪ್ರವಚನವೆಂಬ ಕಾಯಕದಲ್ಲಿ ನಿರತರಾದರು.

ಧರ್ಮ ಪ್ರಚಾರಕ್ಕೆ ಒಂದು ಸಂಸ್ಥೆ ಅವಶ್ಯವೆಂದು "ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್" ಎಂಬ ಸಂಸ್ಥೆಯನ್ನು ಕಟ್ಟಿ, ಧರ್ಮ ಪ್ರಚಾರಕರನ್ನು ತಯಾರು ಮಾಡುವ ಕೇಂದ್ರ ಸ್ಥಾಪಿಸಿದರು. ಅನೇಕ ಜನ ಶರಣ ಶರಣೆಯರು ತರಬೇತಿ ಹೊಂದಿ ಧನ್ಯರಾಗಿದ್ದಾರೆ.

ಅನುಭವ ಮಂಟಪಕ್ಕೆ ಅಕ್ಕಮಹಾದೇವಿ ಬಂದಂತೆ ಮಾತೆ ಮಹಾದೇವಿಯವರು ಈ ಸಂಸ್ಥೆಗೆ ಬಂದು ಅದ್ಭುತ ಪವಾಡವನ್ನೆ ಮಾಡಿದರು. ರಾಮಕೃಷ್ಣ ಪರಮಹಂಸರು ವಿವೇಕಾನಂದರಿಗೆ ತಮ್ಮಲ್ಲಿರುವ ಶಕ್ತಿಯನ್ನೆಲ್ಲ ಧಾರೆ ಎರೆದು ಧರ್ಮಪ್ರಚಾರಕರನ್ನಾಗಿ ಮಾಡಿದರಂತೆ. ಇಲ್ಲಿ ಲಿಂಗಾನಂದ ಸ್ವಾಮಿಗಳು "ಮಾತೆ ಮಹಾದೇವಿ" ಎಂಬ ಅಭಿಧಾನ ನೀಡಿ ತಮ್ಮ ಜ್ಞಾನವನ್ನು ಅವರಿಗೆ ಧಾರೆ ಎರೆದರು. ಎಲ್ಲ ರೀತಿಯಿಂದ ಸಹಕಾರ ಕೊಟ್ಟು

ಅವರಲ್ಲಿರುವ ದಿವ್ಯ ವ್ಯಕ್ತಿತ್ವವನ್ನು ಬೆಳಕಿಗೆ ತಂದರು. ಒಬ್ಬ ಧೀರ ಸನ್ಯಾಸಿಯ ಬಳಿಗೆ ಒಬ್ಬ ಹೆಣ್ಣು ಮಗಳು ನಾನು ಸನ್ಯಾಸಿಯಾಗುವೆ ಎಂದು ಆಶ್ರಯ ಕೋರಿ ಬಂದಾಗ ಅವರಲ್ಲಿರುವ ಜ್ಞಾನದ ಬೆಳಕನ್ನು ಕಂಡು ಹಿಡಿದು ಅವರಿಗೆ ಆಶ್ರಯ ಕೊಡಬೇಕಾದರೆ ಅವರಿಗೆ ಎಂಥ ಗಂಡೆದೆ ಇರಬೇಕು. ನೀವೆ ಊಹಿಸಿರಿ! ''ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'' ಎಂಬ ಗುರು ಬಸವವಾಣಿಯಂತೆ ಜಂಗಮಕ್ಕೆ ಮಹತ್ವ ಕೊಟ್ಟರು. ಇದಕ್ಕಾಗಿ ಜನ ಎಷ್ಟೊಂದು ಕಿರುಕುಳ, ಹಿಂಸೆ ಕೊಟ್ಟರು, ಬಿರುನುಡಿಗಳನ್ನಾಡಿ ಮನನೋಯಿಸಿದರು. ಅವನ್ನೆಲ್ಲವನ್ನು ಧೈರ್ಯದಿಂದ ಎದುರಿಸಿದರು. ''ಸ್ತ್ರೀ ಯಾವುದರಲ್ಲೂ ಕಡಿಮೆಯಿಲ್ಲ. ಪ್ರೋತ್ಸಾಹ ಕೊಟ್ಟರೆ ಏನೆಲ್ಲ ಆಗಬಲ್ಲಳು'' ಕೊಟ್ಟು ಸಹಕಾರ ಎಂದು ಸಾಕ್ಷಿ ರೂಪವಾಗಿ ''ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು'' ಧಾರವಾಡದಲ್ಲಿ ಸ್ಥಾಪಿಸಿದರು. ಇದು ಅವರು ಇಟ್ಟ ಇನ್ನೊಂದು ಕ್ರಾಂತಿಯ ಹೆಜ್ಜೆ. ಹೆಣ್ಣು ಮಕ್ಕಳು ಸಹ ಗುರುವಾಗಬಲ್ಲರು, ಜಗದ್ಗುರು ಆಗಬಲ್ಲರು, ದೀಕ್ಷೆ ಕೊಡಬಲ್ಲರು ಎಂಬುದಕ್ಕೆ ಮಾತಾಜಿಯವರೇ ಸಾಕ್ಷಿ. ಗುರುಗಳಿಗೆ ತಕ್ಕ ಶಿಷ್ಯೆಯಾಗಿ ಅವರ ತಲೆಗೆ ಹೂವನ್ನೆ ತಂದ ಯಶಸ್ಸು ಮಾತಾಜಿಯವರಿಗೆ ಸಲ್ಲುವುದು.

ಬೀಜದಂತೆ ವೃಕ್ಷ ; ಗುರುವಿನಂತೆ ಶಿಷ್ಯೆ. ಹಾಲು ಜೇನಿನಂತೆ ಗುರು ಶಿಷ್ಯರು. ಗುರುವಿಗೆ ಮಾತೆಯಾಗಿ, ಶರಣ ವೃಂದಕ್ಕೆಲ್ಲ ಮಾತಾಜಿಯಾಗಿ ಕಂಡರು. ಅಪ್ಪಾಜಿ, ಮಾತಾಜಿ ಎಂದೇ ಶರಣ ಬಳಗವೆಲ್ಲ ಸಂಬೋಧಿಸತೊಡಗಿದರು. ಗುರು ಶಿಷ್ಯರು ಸದಾ ಧರ್ಮಪ್ರಚಾರದ ಬಗ್ಗೆ ವಿಚಾರ ಮಾಡುತ್ತಾ ಧರ್ಮವನ್ನು ಜನರ ಬಳಿಗೆ ಒಯ್ಯುವ ಪ್ರಕಾರ ಮಾಧ್ಯಮಗಳನ್ನು ರೂಢಿಸಿ. ತಮ್ಮ ಜೀವನವನ್ನು ಅದರಲ್ಲಿ ಪೂರ್ಣವಾಗಿ ತೊಡಗಿಸಿ, ಹಗಲು ರಾತ್ರಿ ಬಸವ ಧರ್ಮವನ್ನೆ ಹಾಸಿ, ಹೊದ್ದುಕೊಂಡಿದ್ದರು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಮಾಡಬೇಕೆಂದುಕೊಂಡಿದ್ದ, ಮಾಡಿತೋರಿಸಿದ ಕಾರ್ಯವನ್ನು ಇಂದು ಕಾರ್ಯಗತ ಮಾಡಿದ್ದಾರೆ. ''ಶರಣ ಮೇಳ. ಗಣಮೇಳ, ರಾಷ್ಟ್ರೀಯ ಬಸವ ದಳ, ಕಲ್ಯಾಣ ಪರ್ವ'' ಇವರು ರೂಪಿಸಿಕೊಂಡ ಯೋಜನೆಗಳು. ಇವು ಅಪಾರ ಯಶಸ್ಸನ್ನು ತಂದು ಕೊಟ್ಟಿವೆ. ಇದರಿಂದ ಜನರು ಜಾಗೃತಿಗೊಂಡಿದ್ದಾರೆ. ನಮ್ಮ ಧರ್ಮದ ಬಗ್ಗೆ ಗುರುವಿನ ಬಗ್ಗೆ ತಿಳಿಯಬೇಕಾದರೆ ''ಧರ್ಮಕ್ಷೇತ್ರ''ಗಳಾದ ಕೂಡಲ ಸಂಗಮ ಕಲ್ಯಾಣಕ್ಕೆ ಹೋಗಿ ಅಲ್ಲಿ ನಡೆಯುವ ''ಶರಣ ಮೇಳ, ಕಲ್ಯಾಣ ಪರ್ವ'' ಇವುಗಳಲ್ಲಿ ಭಾಗವಹಿಸಿದರೆ ಪೂಜ್ಯದ್ವಯರು ಮಾಡಿದ ಸಾಧನೆ ಬಗ್ಗೆ ಯಾರಿಗಾದರೂ ಅರಿವಾಗದೇ ಇರದು.

ಎಲ್ಲರಿಗೂ ಅಕ್ಕರೆಯ ಅಪ್ಪಾಜಿಯಾಗಿ. ಎಲ್ಲರ ಪ್ರೀತಿಗೆ ಪಾತ್ರವಾಗಿದ್ದರು, ಎಲ್ಲರನ್ನು ತುಂಬು ಹೃದಯದಿಂದ ಮಾತನಾಡಿಸಿದಾಗ ಅದರಲ್ಲಿರುವ ಮಾತೃ ಹೃದಯ ಗೋಚರವಾಗುತಿತ್ತು. ಅವರು ಮಾಡಿದ ತ್ಯಾಗ ಅಪಾರವಾದದ್ದು. ನೀರ ತಾವರೆಯಂತೆ ಎಲ್ಲವೂ ತಮ್ಮದಾದರೂ ಯಾವುದನ್ನೂ ತಮ್ಮದೆನ್ನದೆ. ಎಲ್ಲವನ್ನು ಬಸವಣ್ಣನ ಪಾದಕ್ಕೆ ಅರ್ಪಿಸಿ, ನಿರಾಭಾರಿ ಚರಜಂಗಮ ಮೂರ್ತಿಗಳಾಗಿದ್ದರು. ಅವರ ದಿವ್ಯ, ಭವ್ಯ ವ್ಯಕ್ತಿತ್ವವು ಹತ್ತಿರದಿಂದ ಕಂಡವರಿಗೆ ಮಾತ್ರ ಅರಿವಾಗುತ್ತಿತ್ತು. ಎಲ್ಲ ಜಾತಿಯವರಿಗೆ ಲಿಂಗದೀಕ್ಷೆ ಕೊಟ್ಟು, ಮತ ಭೇದವೆಣಿಸದೆ ಎಲ್ಲರಿಗೂ ಆಶ್ರಯ ಕೊಟ್ಟು, ಮೇಲು-ಕೀಳೆನ್ನದೆ ಎಲ್ಲರಿಗೂ ಪ್ರೀತಿ ವಾತ್ಸಲ್ಯ ತೋರಿಸುತ್ತಿದ್ದರು. ಇವನಾರವ, ಇವನಾರವನೆನ್ನದೆ ಎಲ್ಲರೂ ನಮ್ಮವರೇ ಎನ್ನುತ್ತಿದ್ದರು. ಇಂಥ ಕರುಣಾಮಯಿ ಗುರುಗಳು ''ಬಸವ ಧರ್ಮ ಪೀಠ'' ದ ಪೀಠಾಧಿಪತಿಯಾದರು. ತಾನು, ತನ್ನದು, ತನ್ನವರು ಎಂಬ ವ್ಯಾಮೋಹದ ಬೇರು ಕಿತ್ತೊಗೆದಿದ್ದರು. ತಾವು ಕೈಗೊಂಡ ಕಾರ್ಯಗಳನ್ನು, ಸಂಕಲ್ಪಗಳನ್ನು ಈಡೇರಿಸುವಂತಹ ಮಹಾ ಚೇತನ ಮಾತಾಜಿಯವರನ್ನು ಕೊಟ್ಟು ಹೋಗಿದ್ದಾರೆ. ಬಸವ ಧರ್ಮದ ಪ್ರಚಾರಕ್ಕಾಗಿಯೇ ಪ್ರತಿಜ್ಞೆ ತೊಟ್ಟ ಮಾತಾಜಿಯವರಿಗೆ ಗುರುಗಳ, ಬಸವಣ್ಣನವರ ಕೃಪೆ ಸದಾ ಇರಲೆಂದು ಹಾರೈಸುವಾ. ಇಂಥ ಧೀಮಂತ ವ್ಯಕ್ತಿತ್ವವನ್ನು ಹೊಂದಿದ ಯೋಗಿಗಳಾದ ಲಿಂಗಾನಂದರು ಕಾಯ ಜೀವದ ಹೊಲಿಗೆಯನ್ನು ಬಿಚ್ಚಿ ಲಿಂಗದೇವನಲ್ಲಿ ಲೀನವಾದರು. ನಮ್ಮೆಲ್ಲರ ಹೃದಯದಲ್ಲಿ ಜ್ಞಾನ ಜ್ಯೋತಿಯಾಗಿ ಬೆಳಗುತ್ತಿದ್ದಾರೆ. ''ರಾಷ್ಟ್ರೀಯ ಬಸವ ದಳ'' ವನ್ನು ಹುಟ್ಟು ಹಾಕಿದ ಅಪ್ಪಾಜಿಯವರ ಜನ್ಮ ದಿನವನ್ನು ಆಚರಿಸಿ, ಕೃತಜ್ಞತೆ ಸಲ್ಲಿಸಿ, ನಮ್ಮ ಬಾಳನ್ನು ಶರಣ ಪಥದಲ್ಲಿ ಸಾಗಿಸಿ ಧನ್ಯರಾಗುವಾ.

ಶರಣೆ.ರತ್ನಕ್ಕ ನಾಗನಗೌಡ, ಬಳ್ಳಾರಿ.



ಭಾರತದ ರಾಜಧಾನಿ ನವ ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ

೨೦೦೫, ಅಕ್ಟೋಬರ್ ೨೨ ಮತ್ತು ೨೩ ರಂದು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಮತ್ತು ಲಿಂಗಾಯತ ಧರ್ಮ ಮಹಾಸಭಾ ಟ್ರಸ್ಟ್ ಆಶ್ರಯದಲ್ಲಿ 2005ನೇ ಇಸವಿಯ ಅಕ್ಟೋಬರ್ 22 ಮತ್ತು 23ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಭಾರತದ ರಾಜಧಾನಿ ನವ ದೆಹಲಿಯಲ್ಲಿ ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

1. 1997ರಲ್ಲಿ ಅಕ್ಟೋಬರ್ 17,18 ಮತ್ತು 19 ಮೂರು ದಿವಸಗಳ ಕಾಲ ಲಾಲ್ ಕಿಲ್ಲಾ(ಕೆಂಪು ಕೋಟೆ) ಮೈದಾನದಲ್ಲಿ 5ನೆಯ ಬಸವ ಧರ್ಮ ಸಮ್ಮೇಳನವನ್ನು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನಿಮಿತ್ತ ಇಡಲಾಗಿತ್ತು. ಸಮ್ಮೇಳನಕ್ಕಾಗಿ ಬೃಹತ್ತಾದ ಪೆಂಡಾಲ್ ಹಾಕಲಾಗಿತ್ತು. ಮಳೆ ಬಂದರೂ ಸೋರದ ಹೆಚ್ಚಿನ ಖರ್ಚಿನ ವಾಟರ್ ಪ್ರೂಫ್ ಷೆಡ್‌ಅನ್ನು ಅಡಿಗೆ ಮತ್ತು ಊಟಕ್ಕಾಗಿ ನಿರ್ಮಿಸಲಾಗಿತ್ತು. ಆದರೂ ಮಳೆಯಿಂದ ತೊಂದರೆಯಾಯಿತು.

ಈ ಸಲದ ಸಮ್ಮೇಳನವನ್ನು ಪೆಂಡಾಲ್ ಹಾಕಿ ಮಾಡಲಾಗುವುದಿಲ್ಲ. ಏಕೆಂದರೆ, ಏನೆಲ್ಲ ಮುನ್ನೆಚ್ಚರಿಕೆ ತೆಗೆದುಕೊಂಡರೂ ಮಳೆ ಬಂದರೆ ಜನರಿಗೆ ಅನಾನುಕೂಲತೆ ಉಂಟಾಗುತ್ತದೆ. ಆದ್ದರಿಂದ ಸಭಾಂಗಣವೊಂದರಲ್ಲಿ ಸಮ್ಮೇಳನ ಮಾಡಲಾಗುವುದು. ಇದರಿಂದಾಗಿ ಸೀಮಿತ ಸಂಖ್ಯೆಯಲ್ಲಿ ಪ್ರತಿನಿಧಿಗಳಿಗೆ ಅವಕಾಶವಿರುತ್ತದೆ.

2. ನಾವು ಮೊದಲೇ ಪ್ರತಿನಿಧಿ ಶುಲ್ಕ ಕಳಿಸಿ ಹೆಸರನ್ನು ನೋಂದಾಯಿಸಿ ಎಂದು ಸೂಚನೆ ಕೊಟ್ಟರೂ ಲಕ್ಷಿಸದೆ ಶರಣ ಮೇಳಕ್ಕೆ ಬಂದಂತೆ ಒಬ್ಬೊಬ್ಬರ ಜೊತೆಗೆ ಇನ್ನೂ ಹಲವಾರು ಜನ ಬಂದುದರಿಂದ ಸಮ್ಮೇಳನ ಸಮಿತಿಯವರಿಗೆ ವಸತಿ ವ್ಯವಸ್ಥೆ ಮಾಡಲು ಬಹಳ ತೊಂದರೆ ಉಂಟಾಯಿತು. ತಿಂಗಳು ಮೊದಲೇ ಹಾಲ್ ಬುಕ್ ಮಾಡಿದರೂ ಸಿಗದಂತಿಹ ನವ ದೆಹಲಿಯಲ್ಲಿ ಇದ್ದಕ್ಕಿದ್ದಂತೆಯೇ ಜನರು ಬಂದರೆ ವಸತಿ ವ್ಯವಸ್ಥೆ ಮಾಡಲು ಸಾಧ್ಯವಾದೀತೆ? ಇದರಿಂದಾಗಿ ಹೆಚ್ಚುವರಿ ಜನರು ಬಂದು ಮೊದಲೇ ಪ್ರತಿನಿಧಿ ಶುಲ್ಕ ತುಂಬಿ ಹೆಸರು ಕೊಟ್ಟಿದ್ದ ಶಿಸ್ತಿನ ಜನರಿಗೆ ಅನಾನುಕೂಲತೆ ಉಂಟಾಯಿತು. ವಸತಿ ಗೃಹದವರು ಬೇಜಾರು ಮಾಡಿಕೊಂಡರು. ಈ ಬಾರಿ ಅದಕ್ಕೆ ಅವಕಾಶ ನೀಡಲಾಗುವುದಿಲ್ಲ. ಪ್ರತಿನಿಧಿಗಳಿಗೆ ಭಾವಚಿತ್ರ ಅಂಟಿಸಿದ ಗುರುತಿನ ಚೀಟಿ (Identity Card) ಕೊಡಲಾಗುವುದು. ಅದು ಇದ್ದವರಿಗಷ್ಟೆ ವಸತಿ ಗೃಹದೊಳಕ್ಕೆ ಪ್ರವೇಶ ಇರುವುದು. ಅದರಲ್ಲಿ ಕಾರ್ಯಾಲಯದ ವಿಳಾಸ, ಫೋನ್ ನಂಬರ್ ಕೊಟ್ಟಿರಲಾಗುವುದು. ಯಾರಾದರೂ ತಪ್ಪಿಸಿಕೊಂಡರೂ ತಮ್ಮ ವಾಸ್ತವ್ಯದ ಜಾಗ ತಲುಪಲು ಸಹಾಯಕವಾಗುವುದು.

3. ಅಕ್ಟೋಬರ್ 21ರ ಮಧ್ಯಾಹ್ನದಿಂದ 25ರ ಬೆಳಗಿನವರೆಗೆ ಪ್ರತಿನಿಧಿಗಳ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮ್ಮೇಳನ ಸಮಿತಿಯದಾಗಿರುತ್ತದೆ. 22 ಮತ್ತು 23 ಸಮ್ಮೇಳನ, 24ರಂದು ದೆಹಲಿಯ ಸಂದರ್ಶನಕ್ಕೆಂದು ಸಮಯವನ್ನು ನಿಗದಿ ಮಾಡಿದೆ. ಸಂದರ್ಶನ ಮುಗಿಸಿ ರಾತ್ರಿ ಬಂದು ವಾಸವ್ಯ ಮಾಡಲು ಅವಕಾಶ ಕಲ್ಪಿಸಲಾಗಿದೆ. ಊಟದ ವ್ಯವಸ್ಥೆ ಮಾತ್ರ 21ರ ರಾತ್ರಿಯಿಂದ 23ರ ರಾತ್ರಿಯವರೆಗೆ ಇರುತ್ತದೆ. 24ರ ನಂತರದ ಊಟದ ವ್ಯವಸ್ಥೆ ಅವರವರದೆ. ಸಮ್ಮೇಳನ ಸಮಿತಿ ವ್ಯವಸ್ಥೆ ಮಾಡುವ ವಸತಿ ಗೃಹಗಳಿಗೆ ಅದರ ಸ್ಥಳಾವಕಾಶಕ್ಕೆ ತಕ್ಕಂತೆ ಪ್ರತಿನಿಧಿಗಳ ಯಾದಿಯನ್ನು ಕೊಟ್ಟಿರಲಾಗುತ್ತದೆ. ಪರವಾನಗಿ ಪಡೆಯದರಿಗೆ ಅಲ್ಲಿ ಅವಕಾಶ ನೀಡಲಾಗುವುದಿಲ್ಲ.

4. ಬೆಂಗಳೂರಿನಿಂದ ದೆಹಲಿಗೆ ನೇರವಾಗಿ ಹೋಗುವವರಿಗೆ ಸಮ್ಮೇಳನ ಸಮಿತಿಯು ರಿಸರ್ವೇಷನ್ ಮಾಡಲು ನೆರವಾಗುತ್ತದೆ. ಎರಡೂ ಕಡೆಯ ರೇಲ್ವೆ ಛಾರ್ಜು ಬೆಂಗಳೂರು-ದೆಹಲಿ-ಬೆಂಗಳೂರು, ಸರ್ವಿಸ್ ಛಾರ್ಜು ಸೇರಿ 1200ರೂ. ಪ್ರತಿನಿಧಿ ಶುಲ್ಕ ಪ್ರತ್ಯೇಕ.

5. ಸಮ್ಮೇಳನ ಪ್ರತಿನಿಧಿ ಶುಲ್ಕ ಊಟ-ವಸತಿ ಸೇರಿ, 600ರೂ. ಸಾಮೂಹಿಕ ವಸತಿ ವ್ಯವಸ್ಥೆ ಇರುತ್ತದೆ.

ವಿಶೇಷ ಸೂಚನೆ : ಹಿಂದಿನ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸ್ತಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಅರ್ಜಿ ಫಾರ್ಮುಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಇದೇ ಸಂಚಿಕೆಯ 26 ಮತ್ತು 27ನೆಯ ಪುಟದಲ್ಲಿ ಅರ್ಜಿಯ ಮಾದರಿ ಇದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬಹುದು.

6. ಪ್ರತ್ಯೇಕ ರೂಂಗಳ ವ್ಯವಸ್ಥೆ ಬೇಕಾದವರು ಬೇರೆಯಾಗಿ ಹಣವನ್ನು ಮೊದಲೇ ಕಟ್ಟಬೇಕು. ಈ ಹಣವನ್ನು ಸಹ ಪ್ರತಿನಿಧಿ ಶುಲ್ಕ ಅಥವಾ ಅದಕ್ಕೂ ಮೀರಿದ ಕಾಣಿಕೆ ಕೊಡುವವರು ಮೊದಲೇ ಕಳಿಸಬೇಕು. ಏಕೆಂದರೆ ಪ್ರತ್ಯೇಕ ಕೋಣೆಗಳನ್ನು ಮೊದಲೇ ಕಾಯ್ದಿರಿಸಬೇಕಾಗುತ್ತದೆ. ಕೆಲವರು ಕಾಯ್ದಿಡಲು ಬಾಯಿಯಲ್ಲಿ ಹೇಳುತ್ತಾರೆ. ನಂತರ ಅವರು ಬರದೆ ಹೋದರೆ ಕಟ್ಟಿದ ಹಣ ಸಮ್ಮೇಳನ ಸಮಿತಿಯ ಮೇಲೆ ಬೀಳುತ್ತದೆ. ಯಾವ ದಿನಾಂಕದಿಂದ ಯಾವ ದಿನಾಂಕಕ್ಕೆ ಬೇಕು ಎನ್ನುವುದನ್ನು ಸಹ ಮೊದಲೇ ತಿಳಿಸಬೇಕು. ಈ ಬಗ್ಗೆ ವಿವರಗಳನ್ನು ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ಕೊಡಲಾಗುವುದು.

7. ಬೆಂಗಳೂರಿನಿಂದ ದೆಹಲಿಗೆ ಕರ್ನಾಟಕ ಎಕ್ಸ್‌ಪ್ರೆಸ್ (ಪ್ರಯಾಣ 52 ತಾಸು) ಮಾತ್ರವಲ್ಲದೆ ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ವೇಗವಾಗಿ ಮತ್ತು ನೇರವಾಗಿ ಸಾಗಿ ಕೇವಲ 38 ತಾಸುಗಳಲ್ಲಿ ತಲುಪುತ್ತದೆ. ಕರ್ನಾಟಕ ಎಕ್ಸ್‌ಪ್ರೆಸ್ ಬೆಂಗಳೂರಿನಿಂದ ಸಂಜೆ 6-30ಕ್ಕೆ ಬಿಟ್ಟು 2 ದಿನಗಳು ಪಯಣಿಸಿ ಮಧ್ಯಾಹ್ನ 1-00 ಗಂಟೆಗೆ ದೆಹಲಿ ತಲುಪುತ್ತದೆ. ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ (ಕರ್ನಾಟಕ ಸಂಪರ್ಕ ಕ್ರಾಂತಿ) ಯಶವಂತಪುರದಿಂದ ರಾತ್ರಿ 11-30 ಕ್ಕೆ ಬಿಟ್ಟು ಒಂದುವರೆ ದಿನಗಳು ಪಯಣಿಸಿ ರಾತ್ರಿ 12 ಗಂಟೆಗೆ ದೆಹಲಿ ತಲುಪುತ್ತದೆ. ಟ್ರೇನುಗಳು ನಯಿದಿಲ್ಲಿ ರೇಲ್ವೆ ಸ್ಟೇಷನ್ ಮತ್ತು ನಿಜಾಮುದ್ದೀನ್ ರೇಲ್ವೆ ಸ್ಟೇಷನ್‌ನಲ್ಲಿ ನಿಲ್ಲುತ್ತವೆ. ಅಲ್ಲಿಂದ ಸಮ್ಮೇಳನ ಸಮಿತಿಯು ವ್ಯವಸ್ಥೆ ಮಾಡಿರುವ ವಸತಿ ಗೃಹಕ್ಕೆ ಹೋಗಬೇಕಾದರೆ ಲೋಕಲ್ ಬಸ್ ಮಾಡಬೇಕಾಗುತ್ತದೆ. ಅದರ ವೆಚ್ಚವನ್ನು ಪ್ರತಿನಿಧಿಗಳೇ ಭರಿಸಬೇಕು. ಕಳೆದ ಸಲ ನಮ್ಮ ಜನರಿಗೆ ಅನುಕೂಲವಾಗಲೆಂದು ನಾವು ಒಂದು ಕಂಪನಿಯ ಜೊತೆ ಮಾತನಾಡಿ ಹಣವನ್ನು ಮೊದಲೇ ಕಟ್ಟಿದ್ದೆವು. ಟ್ರೇನ್ ಇಳಿದು ಜನರು ಗುಂಪು ಗುಂಪಾಗಿ ಬೇರೆ ಆದುದರಿಂದ ಈ ವಿಷಯ ತಿಳಿಸಲು ನಮಗೆ ಆಗಲೇ ಇಲ್ಲ. ಆ ಡ್ರೈವರ್ ಮತ್ತು ಕಂಡಕ್ಟರ್ ಜಗಳವಾಡಿ ಜನರಿಂದ ಪುನಃ ಹಣವನ್ನು ವಸೂಲಿ ಮಾಡಿದ್ದರು. ನಮ್ಮ ಹಣವೂ ಹೋಯಿತು, ಜನರ ಹಣವೂ ಹೋಯಿತು. ನಮ್ಮ ಕಾರ್ಯಕರ್ತರು ಲೋಕಲ್ ಬಸ್ ಮಾಡಿಕೊಳ್ಳಲು ನೆರವಾಗುತ್ತಾರೆ.

8. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದು ದಿವಸ ಮೊದಲೇ ಬಂದರೆ ಅವರಿಗೆ ಸೂಚನೆ ಕೊಡಲು ಅನುಕೂಲವಾಗುತ್ತದೆ. ಒಂದು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ಮೊದಲೇ ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು.

ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ಸಿನಲ್ಲಿ ರಿಸರ್ವೇಷನ್ ಮಾಡಿಸದೆ ಸಾಮಾನ್ಯ ಬೋಗಿನಲ್ಲಿ ಪಯಣಿಸಿದರೆ ಛಾರ್ಜು ಅರ್ಧಕ್ಕರ್ಧ ಉಳಿತಾಯವಾಗುತ್ತದೆಂಬುದನ್ನು ಆರ್ಥಿಕ ಅಶಕ್ತರು ಗಮನಿಸಬೇಕು.

9. ಸಮ್ಮೇಳನ ನಡೆಯುವ ಸ್ಥಳದ ಬಗ್ಗೆ ಅಕ್ಟೋಬರ್ ಕಲ್ಯಾಣ ಕಿರಣದಲ್ಲಿ ವಿವರ ನೀಡಲಾಗುವುದು.

10. ಶರಣ(ಶನಿ)ವಾರ ದಿ.21-10-2005ರಂದು ಬೆಳಗ್ಗೆ 10-30ಕ್ಕೆ ಸಮ್ಮೇಳನ ಉದ್ಘಾಟನೆ. ಮಧ್ಯಾಹ್ನ 3-30ರಿಂದ 5-30 ಚಿಂತನಗೋಷ್ಠಿ ಸಂಜೆ 6-30 ರಿಂದ 9 ಭಾರತೀಯ ಧರ್ಮಗಳ ಒಕ್ಕೂಟ ಉದ್ಘಾಟನೆ, ಚಿಂತನಗೋಷ್ಠಿ; ದಿ.22-10-2005 ಬೆಳಗ್ಗೆ 10-30 ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆ; 3-30ರಿಂದ ಮೆರವಣಿಗೆ ಹಾಗೂ ಪಥ ಸಂಚಲನ; ಸಂಜೆ 6-30 ರಿಂದ ಸಮಾರೋಪ ಸಮಾರಂಭ.

11. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್-ಗುರುತಿನ ಚೀಟಿ ಹೊಂದಿರಬೇಕು. [ಹಿಂದಿನ ಸಮ್ಮೇಳನದಲಿ ಸ್ಕಾರ್ಫ್‌ಗಳು ಕಳೆದುಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು.]

ಧನ ಸಹಾಯಕ್ಕೆ ವಿನಂತಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾಪೋಷಕರು	:	ರೂ	10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	:	ರೂ	5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	:	ರೂ	3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	:	ರೂ	1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಹಿತೈಷಿಗಳು	:	ರೂ	500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು.

ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ, ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರಸ್ಥಳದ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1. Basava Mahamane Charitable Trust,
   Payable at BANGALORE. ಅಥವಾ
2. Basava Mahamane Charitable Trust
   Payable at NEW DELHI

ವ್ಯವಹರಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ, ಬಸವ ಮಂಟಪ, 2035, 20ನೇ ಮೇನ್ 2ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010, ಕರ್ನಾಟಕ ರಾಜ್ಯ
   ದೂರವಾಣಿ : 23325335/23322790
2. Pujya Sri Channabasavananda Swamiji
   Committee Organiser, First Lingayat Dharma Conference
   BB-74, DDA Flats, Munirka, NEW Delhi-110067
   ಮೊಬೈಲ್ : (0)9448739970, (0)9891809708

ಬಸವ ಕಿರಣ ಮಾಸ ಪತ್ರಿಕೆಗೆ ಚಂದಾದಾರರಾಗಿರಿ.

ರಾಷ್ಟ್ರೀಯ ಬಸವ ದಳಗಳ ಕಾರ್ಯವಿಸ್ತಾರದ ವರದಿ ನೀಡಲು, ಬಸವ ಧರ್ಮ ಪೀಠದ ವಿವಿಧ ಸೂಚನೆಗಳನ್ನು ಬೇಗನೆ ತಲುಪಿಸಲು "ಬಸವ ಕಿರಣ" ಎಂಬ ಮಾಸ ಪತ್ರಿಕೆಯನ್ನು ಬೆಂಗಳೂರು ರಾಷ್ಟ್ರೀಯ ಬಸವ ದಳದ ಗಣಾಚಾರ ದಳದವರು ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳ ಸಂಪಾದಕತ್ವದಲ್ಲಿ ಬಸವ ಪಂಚಮಿಯಂದು ಆರಂಭಿಸಿದ್ದಾರೆ. ಕಲ್ಯಾಣ ಕಿರಣವು ಪ್ರತಿ ತಿಂಗಳ 3ರಂದು ಅಂಚೆಗೆ ಹಾಕಲ್ಪಟ್ಟರೆ ಬಸವ ಕಿರಣವು ದಿ.15ರಂದು ಅಂಚೆಗೆ ಹೋಗುತ್ತದೆ. ವಾರ್ಷಿಕ ಚಂದಾ 60ರೂ ದ್ವೈವಾರ್ಷಿಕ 110ರೂ. ಹೆಚ್ಚಿನ ಸಂಖ್ಯೆಯಲ್ಲಿ ಚಂದಾದಾರರಾಗಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ. ಬೆಂಗಳೂರು ಬಸವ ಮಂಟಪದಲ್ಲಿ ವಿಳಾಸಕ್ಕೆ ಮಯಾರ್ಡರ್ ಕಳಿಸಿಕೊಡಲು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಅಭಿಮತ

ವಚನ ಸಾಹಿತ್ಯದ ಆಧಾರದ ಮೇಲೆ ಬಸವಣ್ಣನವರ ಜೀವನದ ಹೊಸ ಅಧ್ಯಯನ ಅಗತ್ಯ

" ಸಮತಾವಾದಿ, ಶ್ರೇಷ್ಠ ಸಮಾಜ ಸುಧಾರಕ, ಕ್ರಾಂತಿಯೋಗಿ ಬಸವಣ್ಣನವರ ಜೀವನದ ಹೊಸ ಅಧ್ಯಯನವು ಇಂದು ಲಭ್ಯವಾಗಿರುವ ವಿಪುಲವಾದ ವಚನ ಸಾಹಿತ್ಯದ ಬೆಳಕಿನಲ್ಲಿ ಆಗುವುದು ಅವಶ್ಯವಿದೆ. ಕೆಲವಾರು ದಶಕಗಳ ಹಿಂದೆ ಹರಿಹರನ ಬಸವರಾಜ ದೇವರ ರಗಳೆ, ಭೀಮಕವಿಯ ಬಸವ ಪುರಾಣಗಳ ಆಧಾರದ ಮೇಲೆ ಬಸವಣ್ಣನವರ ಚರಿತ್ರೆಯನ್ನು ರಚಿಸಲಾಯಿತು. ಪ್ರಗತಿಪರ ಚಿಂತಕರಾದ ಬಸವಣ್ಣನವರ ತತ್ತ್ವ ಸಿದ್ಧಾಂತಗಳಿಗೆ ವಿರುದ್ಧವಾದ ಹಲವಾರು ಪ್ರಸಂಗಗಳನ್ನು ಈ ಕವಿಗಳು ತಮ್ಮ ಕಾವ್ಯಗಳಲ್ಲಿ ಸೇರಿಸಿಬಿಟ್ಟಿದ್ದಾರೆ. ವಚನ ಸಾಹಿತ್ಯ ಈಗ ಸಾಕಷ್ಟು ಪ್ರಕಾಶನಗೊಂಡಿದ್ದು, ಬಸವಣ್ಣನವರು ಮತ್ತು ಅವರ ಸಮಕಾಲೀನರ ವಿಚಾರಧಾರೆಗೆ ಕನ್ನಡಿ ಹಿಡಿಯುತ್ತಿದೆ. ಇದರ ಬೆಳಕಿನಲ್ಲಿ ನಾವಿಂದು ಬಸವಾದಿ ಪ್ರಮಥರ ಜೀವನ ಚರಿತ್ರೆಯನ್ನು ಪುನರ್‌ರಚಿಸಬೇಕಾಗಿದೆ " **ಎಂದು ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು.**

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಬೆಂಗಳೂರಿನ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ದಿನಾಂಕ 10ರಂದು ಬೆಳಗಿನ 11 ಗಂಟೆಗೆ ಏರ್ಪಡಿಸಿದ್ದ ವಿಶ್ವಗುರು ಬಸವಣ್ಣನವರ 810ನೆಯ ಲಿಂಗೈಕ್ಯ ಸಂಸ್ಮರಣೆಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡುತ್ತಿದ್ದರು.

"ಬಸವಣ್ಣನವರು 1168ರಲ್ಲಿ ಲಿಂಗೈಕ್ಯರಾದರೆಂಬ ತಿಳುವಳಿಕೆ ಇತ್ತು. ಇದು ತಪ್ಪು.. ಸ್ವಾಮಿ ಕನ್ನು ಪಿಳ್ಳೆ ಅವರ ಲೆಕ್ಕಾಚಾರದ ಪ್ರಕಾರ ವರ್ಣಾಂತರ ವಿವಾಹದಿಂದ ಕಲ್ಯಾಣ ಕ್ರಾಂತಿಯಾದ ರಾಕ್ಷಸನಾಮ ಸಂವತ್ಸರವು 1196 ರಲ್ಲಿ ಬರುತ್ತದೆ. ಆಂಧ್ರದ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬಸವಣ್ಣನವರು ಲಿಂಗೈಕ್ಯರಾದ ಮೇಲೆ ಶ್ರದ್ಧಾಂಜಲಿ ಗೀತೆಯನ್ನು ಬರೆದು, ನಂತರ ಲಿಂಗೈಕ್ಯರಾಗಿದ್ದು 1197ರಲ್ಲಿ. ಬಸವಣ್ಣನವರು ಕೇವಲ 36ವರ್ಷ ಬದುಕಿದ್ದರೆಂದು, ಅವರಿಗೆ ಇಬ್ಬರು ಪತ್ನಿಯರೆಂದು ಕೆಲವರು ತಿಳಿದಿದ್ದಾರೆ. ಇದೂ ಸಹ ತಪ್ಪೇ. ವಚನ ಸಾಹಿತ್ಯದ ಪ್ರಕಾರ ಬಸವಣ್ಣನವರು ಕಲ್ಯಾಣದಲ್ಲಿ ವಾಸವಾಗಿದ್ದುದು 36 ವರ್ಷ. ಅನುಭವ ಮಂಟಪ ನಡೆದುದು 27 ವರ್ಷ. ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ. ಆ ತಾಯಿಯ ಹೆಸರು ನೀಲಗಂಗಾ. ಬಸವಣ್ಣನವರು ಕಲ್ಯಾಣದಿಂದ ಹೇಡಿಯಂತೆ ಓಡಿ ಹೋದರು ಎಂದು ಕೆಲವರು ಕುಚೋದ್ಯದಿಂದ ಬರೆಯುವುದುಂಟು, ಬ್ರಾಹ್ಮಣ ಮಧುವರಸರ ಪುತ್ರಿ ಸಮಗಾರ ಹರಳಯ್ಯನವರ ಪುತ್ರನ ಮಧ್ಯೆ ವಿವಾಹಕ್ಕೆ ಧಾರ್ಮಿಕ ಸಮ್ಮತಿಯನ್ನು ನೀಡಿ ಪ್ರೋತ್ಸಾಹಿಸಿದ್ದರಿಂದ ಬಸವಣ್ಣನವರು ಗಡಿಪಾರು ಶಿಕ್ಷೆಗೆ ಒಳಗಾದರು. ಚನ್ನಬಸವಣ್ಣನವರು ತಪಸ್ಸು ಮಾಡಲು ಉಳವಿಗೆ ಹೋದರೆಂದು ಕೆಲವು ಲೇಖಕರು ಬರೆಯುತ್ತಾರೆ. ಜಾತಿವಾದಿಗಳು ಕ್ರಾಂತಿಕಾರಿ ವಿಚಾರ ಧಾರೆಯ ವಚನ ಸಾಹಿತ್ಯವನ್ನು ನಾಶಮಾಡಲು ಯತ್ನಿಸಿದಾಗ ಅದನ್ನು ರಕ್ಷಿಸಲು ವೀರ ಸನ್ಯಾಸಿ ಚನ್ನಬಸವಣ್ಣನವರು, ಮಡಿವಾಳ ಮಾಚಿದೇವರು ಮುಂತಾದವರು ವಚನ ಸಾಹಿತ್ಯದೊಡನೆ ಉಳವಿಯ ಅರಣ್ಯಗರ್ಭವನ್ನು ಸೇರಿದರು. ಇದೆಲ್ಲಕ್ಕೂ ವಚನಗಳಲ್ಲೇ ಆಧಾರ ದೊರೆಯುತ್ತದೆ.

ಏನೇ ಇರಲಿ, ಇಂದಿನ ಸಮಾಜ-ರಾಷ್ಟ್ರಗಳು ಎದುರಿಸುತ್ತಿರುವ ಸಂಕಷ್ಟಕ್ಕೆ ಬಸವಣ್ಣನವರ ವಿಚಾರಧಾರೆ ಸೂಕ್ತ ಪರಿಹಾರವನ್ನು ಒದಗಿಸಬಲ್ಲುದು. ಆದ್ದರಿಂದ ಸಮಾಜ ಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಎಲ್ಲ ದಿಕ್ಕುಗಳಿಂದಲೂ ಬಸವಣ್ಣನವರ ತತ್ತ್ವ ಸಿದ್ಧಾಂತಗಳನ್ನೂ ಅಧ್ಯಯನ ಮಾಡುವುದಕ್ಕೆ ಕಾಲವು ಸನ್ನಿಹಿತವಾಗಿದೆ. ಇವನಾರವ ಇವನಾರವ ಎಂದು ಯಾರನ್ನು ದ್ವೇಷಿಸದೆ, ತಿರಸ್ಕರಿಸದೆ ಇವ ನಮ್ಮವ ಇವ ನಮ್ಮವ ಎಂದು ಎಲ್ಲರನ್ನು ಆದರಿಸುವ ಬಸವಣ್ಣನವರ ವಿಶ್ವಕುಟುಂಬತ್ತ್ವದ ಸೂತ್ರ ನಮ್ಮೆಲ್ಲರ ಮಂತ್ರವಾಗಬೇಕಾಗಿದೆ." **ಎಂದು ಮಾತೆ ಮಹಾದೇವಿಯವರು ನುಡಿದರು.**

ಸಂಸ್ಮರಣಾ ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಪ್ರೊ ಟೆಕ್ನಾಲಜೀಸ್‌ನ ಯೂರೋಪ್ ವಿಭಾಗದ ಮೇನೇಜರ್ ಹೆಚ್.ಎಸ್.ಚನ್ನಬಸವಣ್ಣನವರು ಮಾತನಾಡಿ, " ಜಗದ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಸವೆಸಿದ ಗುರು ಬಸವಣ್ಣನವರು ಮಹಾನ್ ತ್ಯಾಗಿಗಳು.; ಜಾತಿ, ವರ್ಣ, ವರ್ಗರಹಿತವಾದ, ಧರ್ಮ ಸಹಿತವಾದ ಕಲ್ಯಾಣರಾಜ್ಯವನ್ನು ನಿರ್ಮಿಸಿದರು. ಎಂಟುನೂರು ವರ್ಷಗಳ ಹಿಂದೆಯೇ ವರ್ಣಾಂತರ ವಿವಾಹವನ್ನು ಮಾಡಿರುವುದು ಮತ್ತು ಜಗತ್ತಿನ ಮೊಟ್ಟ ಮೊದಲ ಪಾರ್ಲಿಮೆಂಟ್ ಎನಿಸಿದ ಅನುಭವ ಮಂಟಪ ಸ್ಥಾಪಿಸಿರುವುದು ಒಂದು ಮಹತ್ಸಾಧನೆ" **ಎಂದು ಕೊಂಡಾಡಿದರು.**

"ಪೂಜ್ಯ ಮಾತಾಜಿಯವರು ಮತ್ತು ಪೂಜ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಅವತರಿಸಿ ಹನ್ನೆರಡನೆಯ ಶತಮಾನದ ಕಲ್ಯಾಣ ರಾಜ್ಯವನ್ನು ಪುನಃಸ್ಥಾಪನೆ ಮಾಡುವುದಕ್ಕಾಗಿ ತಮ್ಮನ್ನೇ ತಾವು ಸಮರ್ಪಿಸಿಕೊಂಡ ಮಹಾನ್ ತ್ಯಾಗಿಗಳು" **ಎಂದು ಚನ್ನಬಸವಣ್ಣನವರು ಹೇಳಿದರು. ಮುಂದುವರೆದು ಮಾತನಾಡುತ್ತ ಅವರು** ಶ್ರೀ ಗುರು ಬಸವಣ್ಣನವರ ಆರ್ಥಿಕ ವಿಚಾರಧಾರೆಗಳನ್ನು ಪ್ರತಿಪಾದಿಸುತ್ತ ಆಡಮಸ್ಮಿತ್ ಎಂಬ ಪಾಶ್ಚಿಮಾತ್ಯ ಅರ್ಥ ಶಾಸ್ತ್ರಜ್ಞನು ತನ್ನ ವೆಲ್ ಆಫ್ ನೇಷನ್ ಎಂಬ ಗ್ರಂಥದಲ್ಲಿ ಹೇಳಿರುವ ವಿಚಾರ ಡಾರ್ವಿನ್ ಸಿದ್ಧಾಂತಕ್ಕೆ ಹೋಲಿಕೆಯಾಗುತ್ತದೆ. Survival of the fittest ಎಂಬ ಡಾರ್ವಿನ್ ಸಿದ್ಧಾಂತವು ಬಲಶಾಲಿಯು ಮಾತ್ರ ಬದುಕಬಲ್ಲ ಎನ್ನುತ್ತದೆ. ಇಂತಹ ಆಡಮ್‌ಸ್ಮಿತ್‌ರವರ ಆರ್ಥಿಕ ವಿಚಾರಧಾರೆಯಿಂದ ಸಮಾಜದಲ್ಲಿ ಹಣದುಬ್ಬರ , ಆರ್ಥಿಕ ವಿಪ್ಲವ ಉಂಟಾಗುತ್ತದೆ. ಶ್ರೀಮಂತನನ್ನು ಶ್ರೀಮಂತನನ್ನಾಗಿಯೇ ಬೆಳೆಸುವ ಬಡವವನನ್ನು ಇನ್ನೂ ಬಡವನನ್ನಾಗಿಯೇ ಉಳಿಸುವ ಸ್ಮಿತ್ ಅವರ ಸಿದ್ಧಾಂತ ಅಭಿವೃದ್ಧಿಯ ದೃಷ್ಟಿಯಿಂದ ಆರೋಗ್ಯಕರವಲ್ಲ.

ಕಾರ್ಲ್‌ಮಾರ್ಕ್ಸ್‌ನು Equal disrtibution of Wealth ಎಂಬ ಸಿದ್ಧಾಂತದ ಮೂಲಕ ಉಳ್ಳವರು ತಮ್ಮ ಸಂಪತ್ತನ್ನು ಇಲ್ಲದವರೊಂದಿಗೂ ಸಮಾನವಾಗಿ ಹಂಚಬೇಕೆಂದು ಪ್ರತಿಪಾದಿಸುತ್ತಾನೆ. ತೀರ ಅವೈಜ್ಞಾನಿಕವಾಗಿರುವ ಈ ನಿಲುವಿನಿಂದ ದುಡಿಯುವವನು ದುಡಿಯುತ್ತಲೇ ಸಾಗುವ ಅವರ ದುಡಿತದ ಪ್ರತಿಫಲವನ್ನು ಮೈಗಳ್ಳರು ಸಮಾನವಾಗಿ ಅನುಭವಿಸುವ ಅವಕಾಶ ದೊರೆಯುತ್ತದೆ. ಇಂತಹ ಅರ್ಥ ವ್ಯವಸ್ಥೆ ನಿಜಕ್ಕೂ ಸ್ವೀಕಾರಾರ್ಹವಲ್ಲ.

ಇವೆರಡಕ್ಕಿಂತ ಸ್ವಲ್ಪ ಗುಣಾತ್ಮಕ ಅಂಶ ಒಳಗೊಂಡಿದ್ದು ಮಹಮ್ಮದೀಯರ ಬ್ಯಾಂಕಿಂಗ್ ವ್ಯವಸ್ಥೆ. ಅಲ್ಲಿ ತಮ್ಮ ಧರ್ಮೀಯರಿಗೆ ಕೊಡುವಂತಹ ಸಾಲಕ್ಕೆ ಬಡ್ಡಿ ಇರುವುದಿಲ್ಲ. ಸಾಲ ಪಡೆದ ವ್ಯಕ್ತಿ ಅದನ್ನು ಮೂಲ ಧನವನ್ನಾಗಿ ಮಾಡಿಕೊಂಡು ವ್ಯಾಪಾರ ಉದ್ದಿಮೆಯ ರಂಗದಲ್ಲಿ ಪ್ರಗತಿ ಸಾಧಿಸಿದಾಗ ಲಾಭಾಂಶದಲ್ಲಿ ತನಗೆ ತಿಳಿದಷ್ಟು ಭಾಗವನ್ನು ಮೂಲ ಧನ ನೀಡಿದ ಬ್ಯಾಂಕಿಗೆ ಅಸಲಿನೊಂದಿಗೆ ಮರುಪಾವತಿ ಮಾಡುವುದು. ಇದು ಒಂದು ರೀತಿಯಿಂದ ಉತ್ತಮವೆನಿಸಿದರೂ ಅಲ್ಲಿ ಸ್ತ್ರೀಯರಿಗೆ ಸಾಲ ಪಡೆಯಲು ಅವಕಾಶವಿರುವುದಿಲ್ಲ; ಮಾತ್ರವಲ್ಲದೆ ಆಯ್ದ ಕೆಲವರಿಗೆ ಸಾಲ ದೊರಕುತ್ತದೆ. ಇದರಿಂದ ಬಡತನ ರೇಖೆಗಿಂತ ಕೆಳಗಿರುವ ನಿರುದ್ಯೋಗಿ ಮುಸ್ಲಿಂ ವರ್ಗದ ಯುವಕ ಯುವತಿಯರು ಪ್ರಸಕ್ತ ಸಾಲ ಪಡೆಯುವ ಅವಕಾಶದಿಂದ ವಂಚಿತರಾಗುವುದರ ಮೂಲಕ ಆರ್ಥಿಕವಾಗಿ ಯಥಾಸ್ಥಿತಿಯಲ್ಲೇ ಉಳಿಯುತ್ತಾರೆ. ಇವೆಲ್ಲಕ್ಕಿಂತಲೂ ಪರಿಪೂರ್ಣವಾದುದು ಶ್ರೀ ಗುರು ಬಸವಣ್ಣನವರು ರೂಪಿಸಿದ ಆರ್ಥಿಕ ಸಿದ್ಧಾಂತ, ಅವರು ಬೋಧಿಸಿದ ಕಾಯಕ-ದಾಸೋಹ-ಪ್ರಸಾದ-ಜಂಗಮ ಮತ್ತು ಜಂಗಮ ಸೇವೆಯ ಮೂಲಕ ಉತ್ಪಾದನೆ ಮತ್ತು ಹಂಚಿಕೆಯು ಯಾವ ರೀತಿ ಇರಬೇಕೆಂದು ಪ್ರತಿಪಾದಿಸುತ್ತಾರೆ.

ಮನುಷ್ಯ ಹೇಗೆ ಧನಾರ್ಜನೆ ಮಾಡಬೇಕೆಂದರೆ ಆತ ತನು ಮನಕ್ಕೆ ವಂಚನೆ ಇಲ್ಲದೆ ಆತ್ಮ ಸಾಕ್ಷಿಯಾಗಿ ಸದಾ ಸತ್ಯ ಶುದ್ಧ ಕಾಯಕದ ಮೂಲಕ ಗಳಿಸಬೇಕು. ಇಂತಹ ಕಾಯಕದಲ್ಲಿ ಮೇಲು ಕೀಳೆಂಬ ಭೇದ ಭಾವವೆಣಿಸಬಾರದು, ಬೌದ್ಧಿಕ ಶ್ರಮದ ಕಾರ್ಯವಾಗಿರಲಿ ಅಥವಾ ದೈಹಿಕ ಶ್ರಮದ

ಕಾರ್ಯವಾಗಿರಲಿ ವ್ಯತ್ಯಾಸ ಎಣಿಸಬಾರದು. ಕಾಯಕವನ್ನು ಮಾಡುವ ಸಮಯದಲ್ಲಿ ಗುರು ಲಿಂಗ ಜಂಗಮ ದರ್ಶನವನ್ನಾದರೂ ಮರೆಯಬೇಕು. ಎನ್ನುವುದರ ಮೂಲಕ ಕಾಯಕದ ಮಹತಿಯನ್ನು ಅರುಹುತ್ತಾರೆ. ಸೇವಾ ಮನೋಭಾವನೆಯಿಂದ ಮಾಡುವುದು ಕಾಯಕವಾದರೆ ಸಂಬಳದ ಆಸೆಗಾಗಿ ಯಾಂತ್ರಿಕವಾಗಿ ದುಡಿಯುವುದು ಕೆಲಸವಾಗುತ್ತದೆ. ಶರಣರು ಕಾಯಕಕ್ಕೆ ಎಲ್ಲಕ್ಕಿಂತ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದ್ದಾರೆ. ಎಂದರಲ್ಲದೆ ಕಾಯಕದಿಂದ ಗಳಿಸಿದ ಹಣವು ಸತ್‌ಪಾತ್ರಕ್ಕೆ ವಿನಿಯೋಗವಾಗಬೇಕು. ತನುವನ್ನು ಗುರುವಿನ ಸೇವೆಗಾಗಿ, ಮನವನ್ನು ದೇವನ ನೆನಹಿಗಾಗಿ , ಧನವನ್ನು ಸಮಾಜದ ಪ್ರಗತಿಗಾಗಿ ಅರ್ಪಿಸಬೇಕು. ದಾಸೋಹದಲ್ಲಿ ಪಂಕ್ತಿ , ವರ್ಣ, ವರ್ಗ,ಲಿಂಗ ಭೇದಗಳನ್ನು ಎಣಿಸದೆ ಸರ್ವರಿಗೂ ಸಮಾನವಾಗಿ ಅರ್ಪಿಸಬೇಕು.

ಜಂಗಮ ಎಂದರೆ ಸಮಾಜ. ನಮ್ಮ ಕಾಯಕದ ಗಳಿಕೆಯ ಒಂದು ಅಂಶವನ್ನು ಸಮಾಜದ ಒಳಿತಿಗೆ ಉಪಯೋಗಿಸಬೇಕು. ಅಂದರೆ ಜಂಗಮಕ್ಕೆ ಸಮರ್ಪಿಸಬೇಕು. ಆ ಅರ್ಪಣೆ ಸತ್‌ಪಾತ್ರಕ್ಕೆ ಸಲ್ಲಬೇಕು. ಉದಾ: ಪೂಜ್ಯ ಮಾತಾಜಿಯವರಿಗೆ, ಬಸವ ಧರ್ಮ ಪೀಠಕ್ಕೆ ಸಲ್ಲಿಸುವ ಕಾಣಿಕೆಯ ಒಂದೊಂದು ಆಣೆಯೂ ಸದ್ವಿನಿಯೋಗವಾಗುತ್ತದೆ. ನಮ್ಮ ಸಮಾಜದ ಪ್ರಾತಿನಿಧಿಕ ಸ್ವರೂಪವಾಗಿರುವ ಬಸವ ಧರ್ಮ ಪೀಠಕ್ಕೆ ಕಾಯಕದಿಂದ ಆರ್ಜಿಸಿದ ಲಾಭದ ಒಂದು ಅಂಶವನ್ನು ಸಲ್ಲಿಸುವುದರಿಂದ ಅಧ್ಯಾತ್ಮಿಕ ಪ್ರವಚನ, ಉತ್ಕೃಷ್ಟಸಾಹಿತ್ಯ ಪ್ರಕಟಣೆ , ಶರಣ ಮೇಳ ಉತ್ಸವ, ಕಲ್ಯಾಣ ಪರ್ವ, ಶರಣ ಸಾಹಿತ್ಯದ ಧ್ವನಿ ಸುರುಳಿ , ಸಿಡಿ, ಮುಂತಾದ ಸಮಾಜ ಕಲ್ಯಾಣ ಕಾರ್ಯಕ್ಕೆ ಅರ್ಪಿಸಲ್ಪಡುತ್ತದೆ. "ಮರಕ್ಕೆ ಬಾಯಿ ಬೇರೆಂದು ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ "ಎಂಬಂತೆ ಬಸವ ಧರ್ಮ ಪೀಠ ಎಂಬ ಬೇರಿಗೆ ನೀರೆರೆದರೆ ಸಮಾಜ ಮುಖಿ ಕಾರ್ಯಗಳು ನಿರಾತಂಕವಾಗಿ ಸಾಗುತ್ತವೆ. **ಎಂದು ಎಚ್.ಎಸ್.ಚನ್ನಬಸವಣ್ಣನವರು ನುಡಿದರು.**

ಶ್ರೀ ಗುರು ಬಸವಣ್ಣನವರು "ಹಡೆದೊಡವೆ ವಸ್ತುವನ್ನು ಮೃಡ ಭಕ್ತರಿಗಲ್ಲದೆ ಕಡ ಬಡ್ಡಿಗೆ ಕೊಡಲಾಗದು "ಎನ್ನುತ್ತಾರೆ. ಅಂದರೆ ಅವರ ದೃಷ್ಟಿಯಲ್ಲಿ ಬಡ್ಡಿ ವ್ಯವಹಾರವು ಸಲ್ಲದು. ಆದರೆ ಮೂಲ ಧನವನ್ನು ಸಾಲ ರೂಪದಲ್ಲಿ ನೀಡುವ ವ್ಯಕ್ತಿ ಬಡ್ಡಿಯನ್ನು ಪಡೆಯದಿದ್ದರೆ ಆತನ ಜೀವನ ನಿರ್ವಹಣೆ ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅರಿತಿದ್ದ ಅವರು ಕಡ ಬಡ್ಡಿಯನ್ನು ಸ್ವೀಕರಿಸಬಾರದು ಎಂದಿದ್ದಾರೆಯೇ ವಿನಃ ಬಡ್ಡಿಯನ್ನು ಸ್ವೀಕರಿಸಬಾರದು ಎಂದು ಹೇಳಿಲ್ಲ. ಅವರು ತಮ್ಮ ವಚನದಲ್ಲಿ "ಮ್ಮನವಾದರೆ ನುಡಿವನು, ಇಮ್ಮನವಾದರೆ ನುಡಿಯನು. ಕಾಣಿಯ ಸೋಲ, ಅರ್ಧಕಾಣಿಯ ಗೆಲ್ಲ " ಎಂದು ವ್ಯಾಪಾರಿಯಾದವನು ಇಮ್ಮನವಿಲ್ಲದೆ ಒಮ್ಮನದಿಂದ ವ್ಯಾಪಾರ ಮಾಡಬೇಕು. ಇಮ್ಮನವೆಂದರೆ "Double Profit" ಅಥವಾ "Compound Interest" ಒಮ್ಮನವೆಂದರೆ Profit ಅವರ ದೃಷ್ಟಿಯಲ್ಲಿ ಆರ್ಥಿಕ ದುರ್‌ಲಾಭ ಅಂದರೆ Black Market ಅವರ ದೃಷ್ಟಿಯಲ್ಲಿ ನಿಷಿದ್ಧ.

"ಮತಿಗೆಟ್ಟು ಅನ್ಯರ ಬೇಡದಂತೆ" ಸ್ವಾಭಿಮಾನಪೂರ್ಣ ಕ್ರಿಯಾಶೀಲನು ಗೌರವಾನ್ವಿತವಾಗಿ ಬದುಕಬೇಕೆನ್ನುತ್ತಾರೆ.

"ಕಾಗೆ ಒಂದಗುಳ ಕಂಡರೆ" ವಚನದ ಮೂಲಕ ' ಒಬ್ಬರು ಎಲ್ಲರಿಗೆ ಎಲ್ಲರೂ ಒಬ್ಬರಿಗ' ಎಂಬ ಸಹಕಾರದಿಂದ ಜೀವಿಸಬೇಕೆಂದು ತಿಳಿಸುತ್ತಾರೆ.

"ಹಾಲ ನೇಮ ಹಾಲ ಕೆನೆಯ ನೇಮ, ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮವನ್ನೇಕೆ ಹೊಂದಬೇಕು? ಅಂಬಲಿಯ ನೇಮ ಸಾಲದೆ?" ಎಂದು ವಿನಾಕಾರಣ ದುಂದುವೆಚ್ಚ ಆಡಂಬರದ ಜೀವನ ಸಾಗಿಸುವುದನ್ನು ವಿರೋಧಿಸುತ್ತಾರೆ. ತನ್ಮೂಲಕ ಸರಳ , ಸಹಜ ಜೀವನ ಶೈಲಿಯನ್ನು ಪ್ರತಿಪಾದಿಸುತ್ತಾರೆ. ವಿನಾ ಕಾರಣ ಗಜಾನನೋತ್ಸವ ಸಂದರ್ಭದಲ್ಲಿ ವಾಯು ಮಾಲಿನ್ಯ ಉಂಟಾಗುವಂತೆ ಸುಡುವ ಮದ್ದು , ಶಬ್ದ ಮಾಲಿನ್ಯ ಸೃಜಿಸುವ ಕರ್ಕಶ ಧ್ವನಿವರ್ಧಕಗಳು, ಆಡಂಬರದ ಪೆಂಡಾಲ್ ವ್ಯವಸ್ಥೆ ಮುಂತಾಗಿ ಹಣವನ್ನು ವ್ಯರ್ಥವಾಗಿ ಸೂರೆಗೊಳಿಸುವ ಜನರು

ಶರಣರು ಬೋಧಿಸಿದ ಸರಳತೆಯನ್ನು ಅರ್ಥಮಾಡಿಕೊಳ್ಳಬೇಕು ಎಂದು **ಚನ್ನಬಸವಣ್ಣನವರು ನುಡಿದರು.**

"ಆಯುಷ್ಯ ಉಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ; ಆಯುಷ್ಯ ತೀರಿ ಪ್ರಳಯ ಬಂದರೆ ಅರ್ಥವನ್ನುಂಬುವರಿಲ್ಲ. ನೆಲನನಗೆದು ಮಡುಗದಿರಾ-ನೆಲ ನುಂಗಿದೊಡುಗುಳುವುದೆ? ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿನೆರಹಿ ಉಣ್ಣದೇ ಹೋಗದಿರಾ" ಎಂದು ಬಸವಣ್ಣನವರು ನುಡಿಯುತ್ತಾರೆ. ಹೆಚ್ಚಿಗೆ ಹಣವುಳ್ಳ ಕೆಲವರು ಹಿಂದಿನ ಕಾಲದಲ್ಲಿ ಮಡಿಕೆಯಲ್ಲಿ ತುಂಬಿ ನೆಲದಲ್ಲಿ ಹೂಳುತ್ತಿದ್ದರು. ಹೀಗೆ ಬಚ್ಚಿಟ್ಟ ಹಣ ಅವರಿಗೂ ಉಪಯೋಗಕ್ಕೆ ಬಾರದೆ ಸಮಾಜಕ್ಕೂ ಉಪಯೋಗಕ್ಕೆ ಬಾರದೆ ವ್ಯರ್ಥವಾಗುತ್ತಿತ್ತು. ಇಂಥವರ ಬಗ್ಗೆ ವಿಡಂಬನಾತ್ಮಕವಾಗಿ ನುಡಿಯುತ್ತಾರೆ. ಹೀಗೆ ಶ್ರೀ ಗುರು ಬಸವಣ್ಣನವರು ತಮ್ಮ ಆರ್ಥಿಕ ವಿಚಾರಧಾರೆಗಳ ಮೂಲಕ ವಿಶ್ವದ ಅತ್ಯಂತ ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿ ಗೋಚರಿಸುತ್ತಾರೆ,ಎಂದು ಹೆಚ್.ಎಸ್.ಚನ್ನಬಸವಣ್ಣನವರು ನುಡಿದರು. ನಮ್ಮ ಬದುಕಿನಲ್ಲಿ 5 ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. 1. ವೈಯಕ್ತಿಕ 2.ಸಾಮಾಜಿಕ 3. ರಾಷ್ಟ್ರೀಯ 4.ಜಾಗತಿಕ 5. ಆರ್ಥಿಕ, ಇಂಥ ವಿವಿಧ ಸಮಸ್ಯೆಗಳಿಗೆ ಶರಣರ ವಚನಗಳಲ್ಲಿ ಸಿದ್ಧೌಷಧವಿದೆ.

1.ವೈಯಕ್ತಿಕ ಸಮಸ್ಯೆ ಎಂದರೆ ನನಗೆ ಒಳ್ಳೆಯ ಪತ್ನಿ ದೊರೆಯುವಳೋ ಇಲ್ಲವೋ , ನಾನು ಎಲ್ಲಾ ರಂಗದಲ್ಲಿಯೂ ಬೆಳೆಯುತ್ತೇನೊ ಇಲ್ಲವೋ ಎಂಬ ಆತಂಕ ಮುಂತಾದವು

2.ಸಾಮಾಜಿಕ ಸಮಸ್ಯೆ ಎಂದರೆ ಜಾತಿ ವ್ಯವಸ್ಥೆ ವರ್ಗ ಭೇದ ವರ್ಣ ಭೇದ ಮುಂತಾದವು

3.ರಾಷ್ಟ್ರೀಯ ಸಮಸ್ಯೆ ಎಂದರೆ ಭಯೋತ್ಪಾದನೆ, ಕೋಮು ಸಂಘರ್ಷ ಮುಂತಾದವುಗಳು

4.ಜಾಗತಿಕ ಸಮಸ್ಯೆ ಎಂದರೆ ವಿಶ್ವವನ್ನು ಕಾಡುತ್ತಿರುವ ಭಯಾನಕ ಏಡ್ಸ್ ರೋಗ, ಧರ್ಮಾದಂತೆ ಮುಂತಾದವುಗಳು

5.ಆರ್ಥಿಕ ಸಮಸ್ಯೆ ಎಂದರೆ ಹಣದುಬ್ಬರ, ವಿಪ್ಲವಗೊಳ್ಳುತ್ತಿರುವ ಬ್ಯಾಂಕಿಂಗ್ ವ್ಯವಸ್ಥೆ ಇತ್ಯಾದಿ

ಈ ಎಲ್ಲಾ ಸಮಸ್ಯೆಗಳಿಗೆ ಶ್ರೀ ಗುರು ಬಸವಣ್ಣನವರ ವಚನಗಳಲ್ಲಿ ಪರಿಹಾರವಿದೆ. " ಮಡಕೆಯ ಮಾಡುವರೆ ಮಣ್ಣೇ ಮೊದಲು " ವಚನದಲ್ಲಿ ವೈಯಕ್ತಿಕ ಉದ್ಧಾರದ ಬಗ್ಗೆ ಉಲ್ಲೇಖವಿದ್ದರೆ, "ಕಲ್ಲ ನಾಗರ ಕಂಡರೆ ಹಾಲನೆರೆಎಂಬರು......." ಸಾಮಾಜಿಕ ಮೂಢನಂಬಿಕೆಗಳ ಬಗ್ಗೆ ವಿಷಾದ ಮತ್ತು ಸುಧಾರಣೆಯ ಕಳಕಳಿ ಇದೆ. "ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ........" ಎಂಬ ವಚನದಲ್ಲಿ ಕರ್ತವ್ಯ ಮತ್ತು ರಾಷ್ಟ್ರೀಯ ಪ್ರಜ್ಞೆ ಇದೆ. ಅಜಕಡ ಬಡ್ಡಿಯ ಕೊಡಬೇಡ....." ಈ ವಚನದಲ್ಲಿ ಆರ್ಥಿಕ ಸಮಸ್ಯೆಗೆ ಪರಿಹಾರವಿದೆ. ಅಜಿದಯವೇ ಧರ್ಮದ ಮೂಲವಯ್ಯ ಎಂಬಲ್ಲಿ...... "ಸಮಷ್ಟಿಪ್ರಜ್ಞೆ ಇದೆ.ಹೀಗೆ ಶ್ರೀ ಗುರು ಬಸವಣ್ಣನವರ ಆರ್ಥಿಕ ವಿಚಾರಗಳು ಸಾಮಾಜಿಕ ವಿಚಾರಗಳು ವಿಶ್ವದ ಪ್ರಸಕ್ತ ದಿನಮಾನದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವಾಗಿವೆ. ಇಂತಹ ತತ್ವಗಳನ್ನು ಕನ್ನಡನಾಡು ಹಾಗೂ ಹೊರರಾಜ್ಯಗಳಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಅತ್ಯಂತ ಯಶಸ್ವಿಯಾಗಿ ಪ್ರಚಾರ ಮಾಡಿರುವ -ಮಾಡುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಕೈಂಕರ್ಯ ಎಲ್ಲರಿಗೂ ಆದರ್ಶಪ್ರಾಯವಾಗಿದೆ **ಎಂದು ಹೆಚ್.ಎಸ್.ಚನ್ನಬಸವಣ್ಣನವರು ನುಡಿದರು.**

ಕಾರ್ಯಕ್ರಮದ ಕೊನೆಯಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ನಿರ್ಣಯಗಳು :

1.ಲಿಂಗಾಯತ ಧರ್ಮವು 'ಸ್ವತಂತ್ರ ಧರ್ಮ'ವೆಂದು ಸಾಂವಿಧಾನಿಕ ಮಾನ್ಯತೆ ಪಡೆಯಲು ಪ್ರಯತ್ನಿಸುವುದು.

2. ಸಾವಿರ ಜನಕ್ಕೊಂದು ಸಾರಾಯಿ ಅಂಗಡಿ ತೆರೆಯಲು ಯೋಚಿಸುತ್ತಿರುವ ಕರ್ನಾಟಕದ ಸಮ್ಮಿಶ್ರ ಸರ್ಕಾರದ ನಿರ್ಧಾರವನ್ನು ಕೈಬಿಡಲು ಒತ್ತಾಯಿಸುವುದು.

3. ಲಿಂಗಾಯತ ಧರ್ಮ ಭಾಷೆ ಕನ್ನಡ. ಲಿಂಗಾಯತ ಧರ್ಮೀಯರು ಕಡ್ಡಾಯವಾಗಿ ಕನ್ನಡ ಕಲಿಯಬೇಕು.


4. ಕರ್ನಾಟಕದಲ್ಲಿ 1ನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲೀಷ್ ಭಾಷೆಯನ್ನು ಕಲಿಸುವಂತೆ ಆಗ್ರಹಿಸುವುದು.

<u>1. ಲಿಂಗಾಯತ ಧರ್ಮಕ್ಕೆ ಮಾನ್ಯತೆ :</u> ಮಹಾ ಮಾನವತಾವಾದಿ ವಿಶ್ವಗುರು ಬಸವಣ್ಣನವರು ಸ್ಥಾಪಿಸಿರುವ ಲಿಂಗಾಯತ ಧರ್ಮವು ಸ್ವತಂತ್ರ, ಸ್ವಾವಲಂಬಿ ಹಾಗೂ ವೈಜ್ಞಾನಿಕ ಧರ್ಮವಾಗಿದೆ. ವಿಶ್ವಧರ್ಮಕ್ಕೆ ಇರಬೇಕಾದ ಎಲ್ಲ ಸಲ್ಲಕ್ಷಣಗಳೂ ಲಿಂಗಾಯತ ಧರ್ಮಕ್ಕೆ ಇವೆ. ಇದು ಹಿಂದು(ವೈದಿಕ) ಧರ್ಮದ ಅಂಗವಲ್ಲ. ಭಾರತೀಯ ಪರಂಪರೆಯಲ್ಲೇ ಜನಿಸಿದ ಹೊಸ ಧರ್ಮಗಳನ್ನು ನೀಡಿದ ಗೌತಮ ಬುದ್ಧ, ಮಹಾವೀರ ಮತ್ತು ಗುರುನಾನಕರಂತೆ , ಶ್ರೀ ಗುರು ಬಸವಣ್ಣನವರು ಸಹ ನವಧರ್ಮ ದ್ರಷ್ಟಾರರು. ಜೈನ, ಬೌದ್ಧ ಮತ್ತು ಸಿಖ್ಖ ಧರ್ಮಗಳಂತೆ ಗುರು ಬಸವೇಶ್ವರರಿಂದ ಸ್ಥಾಪಿಸಲ್ಪಟ್ಟ ಲಿಂಗಾಯತವು ಸಹ ಭಾರತೀಯ ಸಂಸ್ಕೃತಿಯ ಸ್ವತಂತ್ರ ಧರ್ಮ. ಆದ್ದರಿಂದ ಭಾರತ ಸರ್ಕಾರದಿಂದ ಸಾಂವಿಧಾನಿಕ ಮಾನ್ಯತೆ ಪಡೆಯುವ ಅಗತ್ಯವಿದೆ. ಈ ಕುರಿತು ಭಾರತದ ಸನ್ಮಾನ್ಯ ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತಲ್ಲದೆ, ರಾಷ್ಟ್ರೀಯ ಬಸವ ದಳದ ವಿವಿಧ ರಾಜ್ಯಗಳ ಮುಖಂಡರನ್ನೊಳಗೊಂಡ ಪ್ರಾತಿನಿಧಿಕ ನಿಯೋಗವನ್ನು ತೆಗೆದುಕೊಂಡು ದೆಹಲಿಗೆ ಹೋಗಲು ನಿರ್ಧರಿಸಲಾಯಿತು.

<u>2.ಸಾರಾಯಿ ಅಂಗಡಿ ತೆರೆಯದಿರಲು ಮನವಿ :</u> ಕರ್ನಾಟಕದ ಸಮ್ಮಿಶ್ರ ಸರ್ಕಾರವು ಸಾವಿರ ಜನಕ್ಕೆ ಒಂದು ಸಾರಾಯಿ ಅಂಗಡಿ ತೆರೆಯಲಿದೆ ಎಂಬ ಸುದ್ದಿಯನ್ನು ಇತ್ತೀಚೆಗೆ ಪತ್ರಿಕೆಗಳಲ್ಲಿ ನೋಡಿ ತಮಗೆ ಆಘಾತವಾಯಿತು ಎಂದು ಪೂಜ್ಯ ಮಾತಾಜಿಯವರು ನುಡಿದರು. ಇದನ್ನು ಬಸವ ಧರ್ಮ ಪೀಠವು ತೀವ್ರವಾಗಿ ವಿರೋಧಿಸುತ್ತದೆ. ಈಗಾಗಲೇ ಪ್ರತಿಯೊಂದು ಚಿಕ್ಕಹಳ್ಳಿಯಲ್ಲೂ ಅಧಿಕೃತ ಸಾರಾಯಿ ಅಂಗಡಿಗಳಿದ್ದು, ಇನ್ನು ಸಾವಿರ ಜನರಿಗೊಂದು ಅಂಗಡಿ ತೆಗೆಯಲು ಸರಕಾರ ಅನುಮತಿ ನೀಡಿದ್ದೇ ಆದರೆ, ಹಳ್ಳಿಗಳು ಸಂಪೂರ್ಣವಾಗಿ ಕೆಟ್ಟು ಹೋಗುತ್ತವೆ, ಮಾನಸಿಕವಾಗಿ ದುರ್ಬಲರಾದ ಜನರು ಕುಡಿಯಲು ಇಷ್ಟಪಡಬಹುದು ; ಆದರೆ ಸರ್ಕಾರ ಅಧಿಕೃತವಾಗಿ ಹೆಚ್ಚು ಅಂಗಡಿಗಳನ್ನು ತೆರೆದು ಹೆಂಡ ಕುಡಿಸುವುದು ಮಹಾಪಾಪದ ಕೆಲಸ. ಇದರಿಂದ ಸಾವಿರಾರು ಕುಟುಂಬಗಳು ಬೀದಿಪಾಲಾಗುತ್ತಿವೆ. ಮಕ್ಕಳು ನಿರ್ಗತಿಕರಾಗುತ್ತಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಈ ಕುರಿತು ಮರು ಚಿಂತನೆ ಮಾಡಿ ಸಾವಿರ ಜನಕ್ಕೊಂದು ಸಾರಾಯಿ ಅಂಗಡಿ ತೆರೆಯುವ ನಿರ್ಧಾರ ಕೈ ಬಿಡಲು ಸರ್ಕಾರವನ್ನು ಒತ್ತಾಯಿಸುಬೇಕೆಂದು ನಿರ್ಣಯಿಸಲಾಯಿತು.

<u>3. ಲಿಂಗಾಯತ ಧರ್ಮಭಾಷೆ ಕನ್ನಡ . ಲಿಂಗಾಯತ ಧರ್ಮೀಯರು ಕಡ್ಡಾಯವಾಗಿ ಕನ್ನಡ ಕಲಿಯಬೇಕು :</u> ಮುಸ್ಲಿಂ ಧರ್ಮೀಯರಿಗೆ ಅರೇಬಿಕ್ ಧರ್ಮಭಾಷೆಯಾಗಿರುವಂತೆ, ಬೌದ್ಧರಿಗೆ ಪಾಲಿ, ಸಿಖ್ಖರಿಗೆ 'ಪಂಜಾಬಿ' ಧರ್ಮ ಭಾಷೆಯಾಗಿವೆ. ಲಿಂಗಾಯತರ ಧರ್ಮ ಭಾಷೆ ಕನ್ನಡ. ಧರ್ಮಸ್ಥಾಪಕ ಗುರು ಬಸವಣ್ಣನವರು ಹಾಗೂ ಆದಿ ಶರಣರು ವಚನ ಸಾಹಿತ್ಯವನ್ನು ಕನ್ನಡದಲ್ಲಿಯೇ ರಚಿಸಿದ್ದರಿಂದ ತಮ್ಮ ಧರ್ಮಭಾಷೆ ಕನ್ನಡವೆಂದು ನಂಬಿ ಲಿಂಗಾಯತರು ಕಡ್ಡಾಯವಾಗಿ ತಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸಬೇಕು. ಭಾರತದ ಯಾವುದೇ ರಾಜ್ಯಗಳಲ್ಲಿ ಮತ್ತು ವಿದೇಶಗಳಲ್ಲಿ ವಾಸಿಸುತ್ತಿರುವ ಲಿಂಗಾಯತರು ಸಹ ಕಡ್ಡಾಯವಾಗಿ ಕನ್ನಡ ಕಲಿಯುವಂತೆ ಜಾಗೃತಿ ಮೂಡಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

4. <u>ಕರ್ನಾಟಕದಲ್ಲಿ 1ನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲೀಷ ಭಾಷೆಯನ್ನು ಕಲಿಸುವಂತೆ ಆಗ್ರಹಿಸುವುದು.:</u> 1ನೇ ತರಗತಿಯಿಂದಲೇ ಮಕ್ಕಳಿಗೆ ಕಡ್ಡಾಯವಾಗಿ ಇಂಗ್ಲೀಷ್ ಕಲಿಸುವ ವ್ಯವಸ್ಥೆ ಮಾಡಬೇಕೆಂದು ಕರ್ನಾಟಕ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. 1ನೇ ತರಗತಿಯಿಂದಲೇ ಎಲ್ಲ ಮಕ್ಕಳಿಗೂ ಇಂಗ್ಲಿಷ್ ಮತ್ತು ಹಿಂದಿ ಭಾಷೆ ಕಲಿಸುವುದರಿಂದ ಗ್ರಾಮೀಣ ಪ್ರದೇಶದ ಮಕ್ಕಳೂ ಸಹ ನಗರ ಪ್ರದೇಶದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆ ಮಾಡಲು ಅನುಕೂಲವಾಗುವುದು. ಮಾತೃಭಾಷೆ ಕನ್ನಡದ ಬಗ್ಗೆ ಅಭಿಮಾನ ಮೂಡಿಸಿ, ಅದರ ಜೊತೆಯಲ್ಲಿ ಹಿಂದಿ, ಇಂಗ್ಲೀಷ್ ಭಾಷೆಗಳ ಜ್ಞಾನವನ್ನೂ ಮಕ್ಕಳಿಗೆ ನೀಡಬೇಕಾದ್ದು ಇಂದಿನ ಅನಿವಾರ್ಯವಾಗಿದೆ ಎಂದು ಪೂಜ್ಯ ಮಾತಾಜಿಯವರು ತಿಳಿಸಿದರು.



ಬಸವ ಧರ್ಮ ಪೀಠದಿಂದ ಬಿಡುಗಡೆ ಮಾಡಿದ ಬೆಳ್ಳಿಯ ನಾಣ್ಯ



ನಾಣ್ಯದ ಇನ್ನೊಂದು ಬದಿ

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

866666



ಭಾರತದ ರಾಜಧಾನಿ ನವ ದೆಹಲಿಯಲ್ಲಿ 2005ರ ಅಕ್ಟೋಬರ್ 22 ಮತ್ತು 23ರಂದು ನಡೆಯಲಿರುವ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ

ಪ್ರತಿನಿಧಿಯಾಗಿ ಭಾಗವಹಿಸಲು ಅರ್ಜಿ ಪತ್ರ

ಪೂಜ್ಯ ಸಂಘಟಕರೆ,

ಭಾರತದ ರಾಜಧಾನಿ ನವದೆಹಲಿಯಲ್ಲಿ 2005ರ ಅಕ್ಟೋಬರ್ 22 ಮತ್ತು 23 ರಂದು ನಡೆಯಲಿರುವ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಉತ್ಸುಕನಾಗಿ/ಳಾಗಿದ್ದೇನೆ. ವಿವರಗಳು ಕೆಳಕಂಡಂತಿವೆ.

ಹೆಸರು - ಅಡ್ಡ ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ :

ನಮ್ಮ ಕುಟುಂಬ / ಸಮೂಹದಿಂದ ಬರುವ ಜನರ ಸಂಖ್ಯೆ :

ಪ್ರತಿ ನಿಧಿ ಶುಲ್ಕ/ಕಾಣಿಕೆ : ಬ್ಯಾಂಕ್ ಡ್ರಾಫ್ಟ್ ನಂಬರ್

ಒಟ್ಟು ಮೊತ್ತ

ಸಾಮೂಹಿಕ ವಸತಿ ಸಾಕೋ ? ಸಾಕು ☐

ವಿಶೇಷ ಕೋಣೆ ವ್ಯವಸ್ಥೆ ಬೇಕೋ ? ಬೇಕು ☐

ಅದಕ್ಕಾಗಿ ಪ್ರತ್ಯೇಕ ಹಣ ಕೊಡುವಿರಾ ? ಅಹುದು ☐

ರೇಲ್ವೆ ರಿಸರ್ವೇಷನ್ ನಾವೇ ಮಾಡಬೇಕೋ ? ಅಹುದು ☐ ಇಲ್ಲ ☐

ಅದರ ಹಣ ಕಳಿಸಿರುವಿರಾ ? ಬ್ಯಾಂಕ್ ಡ್ರಾಫ್ಟ್ ನಂಬರ್ : ....

ಫೋಟೋ


1. ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಚ್ಚಿರಿ
2. ಒಂದು ಕುಟುಂಬದಿಂದ ಅಥವಾ ಶರಣ ಬಳಗದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅವರ ಭಾವಚಿತ್ರಗಳನ್ನು ಹೆಸರುಗಳೊಡನೆ ಒಂದೇ ಕವರಿನಲ್ಲಿ ಕಳಿಸಬಹುದು.
3. ಬರುವವರ ಹೆಸರು ಮತ್ತು ವಿಳಾಸದ ಪಟ್ಟಿ ಲಗತ್ತಿಸಿರಿ.

ಊರು: .... ದಿನಾಂಕ: .... ಸಹಿ: ....

ವಿಶೇಷ ಸೂಚನೆ: ಒಂದು ಕುಟುಂಬದಿಂದ ಅಥವಾ ಸಮೂಹದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಒಂದು ಬಿಳಿಯ ಹಾಳೆಯಲ್ಲಿ ಅರ್ಜಿ ವಿವರ ಬರೆದು, ಅದರ ಜೆರಾಕ್ಸ್ ಪ್ರತಿ ತೆಗೆದು ಎಲ್ಲರಿಗೂ ಒಂದೊಂದು ಅರ್ಜಿ ಪತ್ರ ಬರೆಯಬಹುದು. ಎಲ್ಲರ ಪ್ರತಿನಿಧಿ ಶುಲ್ಕ / ಕಾಣಿಕೆ ಸೇರಿಸಿ ಒಂದೇ ಬ್ಯಾಂಕ್ ಡ್ರಾಫ್ಟ್ ತೆಗೆಯಬಹುದು. ಅಥವಾ ಒಂದೇ ಅರ್ಜಿ ಬರೆದು, ಅದರಲ್ಲಿ ಭಾಗವಹಿಸುವ ಎಲ್ಲರ ಹೆಸರುಗಳನ್ನು ಬರೆದು, ಫೋಟೋಗಳನ್ನು ಒಂದೇ ಕವರಿನಲ್ಲಿಟ್ಟು ಒಟ್ಟು ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳಿಸಬಹುದು. ಬೆಂಗಳೂರು ವಿಳಾಸಕ್ಕೆ ಪತ್ರ ಕಳಿಸಬೇಕು.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ, 2035
ಕಾರ್ಡ್ ರಸ್ತೆ, 2ನೇ ಬ್ಲಾಕ್, ರಾಜಾಜಿ ನಗರ
ಬೆಂಗಳೂರು - 560010
ದೂರವಾಣಿ : 080-23325335/ 23322790

Basava Mahamane Charitable Trust(R.)
BASAVA MANTAPA
2035, 20th Main, Chord Road
2nd Block, Rajajinagar
BANGALORE-560010
Phone : 23325335 / 23322790



ಕಾರ್ಯಕರ್ತರು ಕುಷ್ಠರೋಗಿಗಳ ಆಸ್ಪತ್ರೆ ಸಂದರ್ಶಿಸಿ ರೋಗಿಗಳಿಗೆ
ಹಣ್ಣು-ಹಾಲು ಹಂಚಿ ಬಂದರು



ಬಸವ ಪಂಚಮಿ (ನಾಗರ ಪಂಚಮಿ) ದಿನ ಬೆಂಗಳೂರು ರಾಷ್ಟ್ರೀಯ ಬಸವ ದಳದ
ಅಂಗ ಸಂಸ್ಥೆ ಗಣಾಚಾರದಳವರು



ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ 810ನೆಯ ಬಸವ ಪಂಚಮಿ ಆಚರಿಸುವಾಗ
ಧ್ವಜಾರೋಹಣಕ್ಕೆ ಮೊದಲು ಕರ್ತನ ಸ್ಮರಣೆ. ಗಣಾಚಾರ ದಳದವರಿಂದ ಧ್ವಜ ವಂದನೆ.



ಧ್ವಜಾರೋಹಣ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ ಅವರಿಂದ



ಬಸವ ಧರ್ಮ ಪೀಠದಿಂದ ತಯಾರಾದ ಬೆಳ್ಳಿಯ ನಾಣ್ಯ ಬಿಡುಗಡೆ
ಪೂಜ್ಯ ಮಾತಾಜಿಯವರಿಂದ




ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ
ಪುಟ್ಟರುದ್ರಪ್ಪನವರಿಂದ ಸ್ವಾಗತ



ಧರ್ಮಗುರು ವಂದನೆ ನೃತ್ಯಾಭಿನಯ
ಪ್ರತಿಭಾ ಗರಗ್ ಅವರಿಂದ




ಆರಂಭದಲ್ಲಿ ಪೂಜೆ - ಪುಷ್ಪ ವೃಷ್ಟಿ- ಆರತಿ. ಶರಣೆ ರಾಣಿ ಸತೀಶ್ ಅವರಿಂದ



ಬಸವ ಪಂಚಮಿ ಆಚರಣೆ ವೇದಿಕೆಯ ಮೇಲೆ ಎಡದಿಂದ ಬಲಕ್ಕೆ ಪೂಜ್ಯ ಚನ್ನಬಸವಾನಂದ ಸ್ವಾಮಿಗಳು,
ಹೆಚ್.ಎಸ್.ಚನ್ನಬಸವಣ್ಣನವರು, ಪೂಜ್ಯ ಮಾತಾಜಿ, ರಾಣಿ ಸತೀಶ್, ಪಾಂಡುರಂಗ ಸೂರ್ಯವಂಶಿ



810ನೆಯ ಬಸವ ಪಂಚಮಿ ಕಾರ್ಯಕ್ರಮ ವೇದಿಕೆ



ರಾಜಾಜಿ ನಗರದ ಶಾಸಕ ನೆ.ಲ.ನರೇಂದ್ರ ಬಾಬು ಅವರಿಂದ ಕ್ರಾಂತಿಯೋಗಿ ಬಸವಣ್ಣ ಚಿತ್ರಕಥೆ, ಎರಡನೆ ಆವೃತ್ತಿ ಬಿಡುಗಡೆ




ವೇದಿಕೆಯ ಮೇಲೆ ಎಡದಿಂದ ಬಲಕ್ಕೆ, ಪೂಜ್ಯ ಮಾತಾಜಿ, ಎಸ್.ಜಿ.ಸುಶೀಲಮ್ಮ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ, ವಿಠ್ಠಲ ಹೇರೂರು, ಅಣ್ಣಪ್ಪ ವಾಲಿ, ಪಾಂಡುರಂಗ ಸೂರ್ಯವಂಶಿ, ಸುಭಾಷ್ ಪಾಟೀಲ್, ನೆ.ಲ.ನರೇಂದ್ರ ಬಾಬು




ನರೇಂದ್ರಬಾಬು ಅವರಿಂದ ಭಾಷಣ




ಅಕ್ಕಮಹಾದೇವಿ ಪಾತ್ರಧಾರಿ ಕುಮಾರಿ ಚೈತ್ರ



ಶರಣರ ತೈಲ ಚಿತ್ರ ಪ್ರದರ್ಶನ ವೀಕ್ಷಿಸುತ್ತಿರುವ ರಾಣಿ ಸತೀಶ್ ಮತ್ತು
ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ ಅವರಿಂದ




ತೆಲುಗಿನಲ್ಲಿ ಅನುವಾದಿತವಾಗಿರುವ ಸಾಮೂಹಿಕ ಪ್ರಾರ್ಥನೆ ಮತ್ತು ಬಸವೇಶ್ವರ ಪೂಜಾವ್ರತ ಪುಸ್ತಕ
ಬಿಡುಗಡೆ, ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ.ಸುಶಿಲಮ್ಮ ಅವರಿಂದ



ರಾಣಿ ಸತೀಶ್ ಅವರಿಂದ ಪುಸ್ತಕ ಪ್ರದರ್ಶನ ಉದ್ಘಾಟನೆ



ರಾಣಿ ಸತೀಶ್ ಅವರಿಂದ ಭಾಷಣ




810ನೆಯ ಬಸವ ಪಂಚಮಿ ಕಾರ್ಯಕ್ರಮ. ವಿಪ್ರೋ ಟೆಕ್ನಾಲಜೀಸ್‌ದ ಯೂರೋಪ್ ಮೇನೇಜರ್ ಹೆಚ್.ಎಸ್.ಚನ್ನಬಸವಣ್ಣನವರಿಂದ ಉದ್ಘಾಟನೆ.



ಹೆಚ್. ಎಸ್. ಚನ್ನಬಸವಣ್ಣನವರಿಂದ ಭಾಷಣ




ದಲಿತ ನೇತಾರ ಪಾಂಡುರಂಗ ಸೂರ್ಯವಂಶಿ ಇವರಿಂದ ಶರಣರ ತೈಲಚಿತ್ರ ಪ್ರದರ್ಶನ ಉದ್ಘಾಟನೆ



ಪಾಂಡುರಂಗ ಸೂರ್ಯವಂಶಿ, ಬೀದರ್ ಅವರಿಂದ ಭಾಷಣ


ವಿಠ್ಠಲ ಹೇರೂರು, ಗುಲಬರ್ಗಾ ಅವರಿಂದ ಭಾಷಣ




ರಾಷ್ಟ್ರೀಯ ಬಸವ ದಳ, ಬೆಂಗಳೂರು ಇವರಿಂದ ಪ್ರಕಾಶಿತವಾಗುವ ಬಸವ ಕಿರಣ ಮಾಸ ಪತ್ರಿಕೆಯ
ಪಥಮ ಸಂಚಿಕೆ ಬಿಡುಗಡೆ, ವಿಧಾನ ಪರಿಷತ್ ಸದಸ್ಯ ವಿಠ್ಠಲ ಹೇರೂರು, ಗುಲಬರ್ಗಾ




ತೈಲ ವರ್ಣ ಚಿತ್ರಳನ್ನು ರಚಿಸಿದ ಕಲಾವಿದ ಬಸವರಾಜ ಮುಗಳಿ ಅವರಿಗೆ ಸತ್ಕಾರ



ಹೆಪ್ಪಿಟ್ಟ ಹಾಲು ಕೃತಿಯ ಹಿಂದಿ ಅನುವಾದ ಮಾಡಿರುವ ವಿದ್ವಾನ್‌ಸದಾಶಿವಯ್ಯ ಅವರಿಗೆ
ಪೂಜ್ಯಸಿದ್ಧರಾಮ ಸ್ವಾಮೀಜಿಅವರಿಂದ ಶಾಲು ಹೊದ್ದಿಸಿಸತ್ಕಾರ




ವಿದ್ವಾನ್ ಸದಾಶಿವಯ್ಯ ಅವರಿಗೆ ಪೂಜ್ಯ ಮಾತಾಜಿಯವರಿಂದ ನೆನಪಿನ
ಕಾಣಿಕೆಯಾಗಿ ಬಸವ ಮೂರ್ತಿಯ ನೀಡಿಕೆ



ಸಾಮೂಹಿಕ ಪ್ರಾರ್ಥನೆ ಮತ್ತು ಬಸವೇಶ್ವರ ಪೂಜಾವ್ರತ ಪುಸ್ತಕಗಳನ್ನು ತೆಲುಗಿಗೆ ಅನುವಾದ ಮಾಡಿರುವ ಮೆಹಬೂಬ್ ನಗರದ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಕೊಂಡಾ ಬಸವರಾಜ ಅವರಿಗೆ ಶಾಲು ಹೊದ್ದಿಸಿ ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳಿಂದ ಸತ್ಕಾರ



ಪೂಜ್ಯ ಮಾತಾಜಿಯವರಿಂದ ನೆನಪಿನ ಕಾಣಿಕೆಯಾಗಿ ಬಸವ ಮೂರ್ತಿಯ ನೀಡಿಕೆ



ಕಾಯಕದ ದಿನವಿದ್ದರೂ ಬಿಡುವ ಮಾಡಿಕೊಂಡು ಬಸವ ಲಿಂಗೈಕ್ಯ ಸಂಸ್ಮರಣೆಯಲ್ಲಿ ಭಾಗವಹಿಸಿದ ಶರಣ ಸಮೂಹ



ಕಾರ್ಯಕ್ರಮದ ನಂತರ ಪ್ರಸಾದ ಸ್ವೀಕಾರ



ಬಸವ ಗಂಗೋತ್ರಿ ಅನಾಥಾಲಯದ ಮಕ್ಕಳಿಂದ ಪೂಜ್ಯ ಮಾತಾಜಿಯವರಿಗೆ ಸ್ವಾಗತ




ಪ್ರತಿಭಾ ಗರಗದ ಅವರಿಂದ ಧರ್ಮಗುರು ಬಸವಣ್ಣನವರಿಗೆ ವಂದನೆ, ನೃತ್ಯದ ಮೂಲಕ



"ಕಲ್ಯಾಣ ಕರೆದಿದೆ ಕಲ್ಯಾಣ" ಗೀತೆಗೆ ಪ್ರತಿಭಾ ಗರಗದ ಅವರಿಂದ ನೃತ್ಯ



ಗೀತೆಯಲ್ಲಿ ಬರುವ ಶರಣರ ಪಾತ್ರಧಾರಿಗಳಾದ ರಾಷ್ಟ್ರೀಯ ಬಸವ ದಳದ
ಅಂಗ ಸಂಸ್ಥೆ "ಬಸವಾಂಕುರ "ದ ಮಕ್ಕಳು.




ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಿಂದ ಹೊರಟ ಮೆರವಣಿಗೆ ಹಾಗೂ ಪಥ ಸಂಚಲನದ ಉದ್ಘಾಟನೆ ಪೂಜ್ಯ ಮಾತಾಜಿಯವರಿಂದ



ಪಥ ಸಂಚಲನದ ನೇತೃತ್ವ ಪೂಜ್ಯ ಸಿದ್ಧರಾಮ ಸ್ವಾಮಿಗಳದ್ದು.




ಬೆಂಗಳೂರಿನ ರಸ್ತೆಯಲ್ಲಿ ಸಾಲಾಗಿ ಶಿಸ್ತಿನಿಂದ ಧ್ವಜ ಹಿಡಿದು ನಡೆದು ಬರುತ್ತಿರುವ ಶರಣ-ಶರಣೆಯರು



ಮಧ್ಯೆ ಮಧ್ಯೆ ಹರ್ಷದಿಂದ ಕುಣಿಯುತ್ತಿರುವ ಕಾರ್ಯಕರ್ತರು



ನೀಲಾಂಬಿಕ ಷಷ್ಠಿಯ ನಿಮಿತ್ತ ದಿ.11-8-2005ರಂದು ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆಯ ಪ್ರಾತ್ಯಕ್ಷಿಕೆ, ಪೂಜ್ಯ ಮಾತಾಜಿ, ಚನ್ನಬಸವಾನಂದ ಸ್ವಾಮೀಜಿ, ಮಾತೆ ಜ್ಞಾನೇಶ್ವರಿ.




ಪೂಜೆಯಲ್ಲಿ ಭಾಗಿಗಳಾಗಿರುವ ಶರಣೆಯರ ಸಮೂಹ



ಬೈಲಹೊಂಗಲ ರಾಷ್ಟ್ರೀಯ ಬಸವ ದಳ ಏರ್ಪಡಿಸಿದ್ದ ಪಾದಯಾತ್ರೆಯಲ್ಲಿ ಪೂಜ್ಯ ಮಾತೆ ಗಂಗಾದೇವಿಯವರು ಪಾದಯಾತ್ರೆ ಮಾಡುತ್ತಿರುವ ದೃಶ್ಯ



ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮದಲ್ಲಿ ರಾಜಶೇಖರನ್‌ರವರಿಂದ ಭಾಷಣ



ಪ್ರವಾಹದಲ್ಲಿ ಸಂತ್ರಸ್ತನಾದ ಮಹಿಳೆಯು ಬಂದು ಶ್ರೀಗಳಿಂದ ಆಶೀರ್ವಾದ ಪಡೆಯುತ್ತಿರುವುದು



ಗೋಕಾಕ್‌ದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಚನ್ನಬಸವಾನಂದ ಶ್ರೀಗಳು ಮಾತನಾಡುತ್ತಿರುವುದು
ಜೊತೆಗೆ ಸಿ.ದೊಡ್ಡವೀರಪ್ಪ, ಕೆ.ಎಸ್.ಕೋರಿಶೆಟ್ಟರ್, ಚನ್ನಬಸವ ಬಿಜಲಿ

ಬಸವ ಧರ್ಮಪೀಠದ ಅಂಗ ಸಂಸ್ಥೆಗಳಿಗೆ
ವಿವಿಧ ಉದ್ದೇಶಗಳಿಗಾಗಿ ಧನ ದಾಸೋಹ ಗೈದ ಶರಣರು

ಕಟ್ಟಡ ನಿಧಿ

ಶರಣೆ.ಡಾ॥ಅನ್ನಪೂರ್ಣ ಮತ್ತು ಮಲ್ಲನಗೌಡ ಹಿರಲಿಂಗಣ್ಣವರು61000
ಸವದತ್ತಿ(ಕೂಡಲ ಸಂಗಮದ ಒಂದು ಸಿಂಗಲ್ ಕೋಣೆಗೆ
ಶರಣೆ.ಸಿ.ಭಾಗ್ಯದೇವಿ ಮತ್ತು ಮಕ್ಕಳು, ಕೊಳ್ಳೇಗಾಲ 61000 (ಬಸವ ಕಲ್ಯಾಣದಲ್ಲಿ ಒಂದು ಸಿಂಗಲ್ ಕೋಣೆಗೆ)

108 ಅಡಿ ಪುತ್ಥಳಿಗೆ ಧನ ದಾಸೋಹ ಗೈದವರು

ಗುಪ್ತದಾನಿ	1,11000	ಎಸ್.ಆರ್.ಕಣವಿ ಡಂಬಳ	11000
ಗುಪ್ತದಾನಿ	1,00111	ಸುರೇಖಾ ಕೇಳ್ಕರ್ ತಾಸಗಾಂವ, ಮಹಾರಾಷ್ಟ್ರ	11000
ಲೀಲಾವತಿ ಲಿಂ॥ನಾರಾಯಣ ಮೊರಬದ, ಸವದತ್ತಿ	50000	ಸರಸಮ್ಮ ಲಿಂ॥ಫಕೀರಪ್ಪ ಗಡೇಕಾರ, ಸವದತ್ತಿ	11000
ಗಿರಿಜಾ ಮತ್ತು ಸಿದ್ದರಾಮಪ್ಪ ಹಂಗರಗೀಕರ್, ಚಿತ್‌ಕೋಟಾ	11000	ಎಸ್.ಎಸ್.ಪಡಕಿ, ಸವದತ್ತಿ	11000
ಬಾಣೂರು ಚನ್ನಪ್ಪ, ಚಿಕ್ಕಮಗಳೂರು	11000	ಶಾಂತಾ ಮಲ್ಲೇಶಪ್ಪ ಕುಸುಗಲ್, ಧಾರವಾಡ	11000
ಜಗದೇವಿ ಶಂಕರಪ್ಪ ಮೊಂಡಪ್ಪನವರು, ಹಿಲಾಲ್‌ಪುರ	11000	ಪಿ.ಜಿ.ಮಮತಾ, ಬೆಂಗಳೂರು	5000
ಸಂಗಮೇಶ.ಜಿ.ಹಾವಣ್ಣನವರು, ಬೆಂಗಳೂರು	11000	ಮಹಾದೇವಪ್ಪ ನಾಗನೂರು, ಧಾರವಾಡ	2001
ಮಹಾಂತೇಶ.ಎಂ.ಹೂಲಿ, ಸವದತ್ತಿ	11000	ನಾಗವೇಣಿ ಡಾ॥ನರಸಿಂಹ ಕುಲಕರ್ಣಿ, ಸವದತ್ತಿ	2001
ಡಾ॥ಮಧುರಾ ಡಾ॥ವಿಜಯ ಕುಮಾರ್, ಸವದತ್ತಿ	11000	ಬಸವಂತಪ್ಪ ಚನ್ನಗೌಡ ದೊಡ್ಡಗೌಡ, ಸವದತ್ತಿ	2000
ಪಾರ್ವತಿ ಶಂಕರ್ ಮಾನಗಾಂವ, ಸವದತ್ತಿ	11000	ಸುಜಾನಾಯಕ್, ಬೆಂಗಳೂರು	1111
ಜಯಶ್ರೀ ನಾಗರಾಜ ಬೋನಗೇರಿ, ಸವದತ್ತಿ	11000	ದಾಕ್ಷಾಯಣಿ ರಾಮನಗೌಡ ಪಾಟೀಲ್, ಸವದತ್ತಿ	1001
ಶಾಂತಾ ದ್ಯಾಮನಗೌಡ ಬಕಾಡೆ(ಕಡಕೋಳ)	11000	ಬಸವಂತಪ್ಪ ಚನ್ನಗೌಡ ದೊಡ್ಡಗೌಡ, ಸವದತ್ತಿ	11111

ಬಸವ ಕಲ್ಯಾಣದ ದಾಸೋಹ ನಿಧಿಗೆ ತಿದ್ದುಪಡಿ

ಸುಭಾಷ್ ಪಾಟೀಲ್, ಹೈದ್ರಾಬಾದ್ ಅಧ್ಯಕ್ಷರು ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳ ಇವರು ಬಸವಣ್ಣನವರ ಬೃಹತ್ ಪುತ್ಥಳಿಗೆ 1,00,000(ಒಂದು ಲಕ್ಷ) ಕೊಟ್ಟಿದ್ದಾರೆ. ಮರೆವಿನಿಂದಾಗಿ 50,000(ಐವತ್ತು ಸಾವಿರ) ಎಂದು ಪ್ರಕಟವಾಗಿದ್ದಕ್ಕೆ ವಿಷಾದಿಸುತ್ತೇವೆ.

ಶರಣೆ.ಲಲಿತಾ ಶಿವಪುತ್ರಯ್ಯ ಹಿರೇಮಠ, ಸವದತ್ತಿ 5000 ಶರಣ.ಸುವರ್ಣ ಚಂದ್ರಶೇಖರ ಮಡಿವಾಳದ, ಸವದತ್ತಿ 5000
ಶರಣೆ.ನೀಲಾಂಬಿಕೆ ಡಾ॥ಬಸವ ಪ್ರಭು ದೊಡ್ಡಮನಿ, ಹುಲಕೋಟಿ 5000

ಬಸವ ಕಲ್ಯಾಣದ ನಿತ್ಯ ದಾಸೋಹ ನಿಧಿಗೆ 1200ರೂ ಸಲ್ಲಿಸಿದವರು

ಶರಣರುಗಳಾದ :

ಲಲಿತಾ ಬಸವಂತ ತುರಮರಿ, ಸವದತ್ತಿ	ಬಿ.ವಿ.ಮಲ್ಲಗೌಡ ವಕೀಲರು	ಶಿವಯೋಗಿ ವೀರಬಸಪ್ಪ ಅತೀಗೇರಿ
ಜ್ಯೋತಿ ಗಂಗಾಧರ ಭುಯ್ಯರ	ಎನ್.ರಮೇಶ ಕುಮಾರ್, ಬೆಂಗಳೂರು	ಗಂಗಪ್ಪ ಬಸವಂತಪ್ಪ ಕುದರಿ
ಯಲ್ಲಪ್ಪ ಮಲ್ಲೇಶಪ್ಪ ಒಕ್ಕುಂದ	ನೀಲವ್ವ ಮಹಾದೇವಪ್ಪ ನಿಡುವಣಿ	ಶಿವಲೀಲಾ ಉಮೇಶ್ ಮನಗೂಳಿ
ಗೀತಾ ಬಾಚಿಕರ್	ಸುಧಾ ಬಸವರಾಜ ಶೆಟ್ಟರ್	ಶರಣ ಬಸವ ಗುಡ್ಡಾನೂರು
ಬಸಮ್ಮ ಕುಮಟಗಿ	ಮಂಜುಳಾ ಶಶಿಧರ ಮಿರ್ಜಿ	ಚನ್ನಬಸಯ್ಯ.ಬ.ಪೂಜಾರ್
ಮಲ್ಲವ್ವ ತಂದೆ ಫಕೀರಪ್ಪ ಗಡೇಕಾರ		ರಮೇಶ್ ಮಜ್ಜಿಗುಡ್ಡ

ಕೂಡಲ ಸಂಗಮದ ನಿತ್ಯ ದಾಸೋಹ ನಿಧಿಗೆ 1111ರೂ ಕೊಟ್ಟವರು
ಶರಣರುಗಳಾದ :

ಸುಶೀಲ ಬಾಯಿ ಶಿವಲಿಂಗಪ್ಪ ಪಾಟೀಲ್, ನಿರ್ಣಾ	ಅನುಸೂಯ ಮಲ್ಲಿಕಾರ್ಜುನ ದೊಡ್ಡಮನಿ	
ಪಾರ್ವತವ್ವ ಮುರಿಗೆಪ್ಪ ಸವಲಟ್ಟಿ, ಸುತಗಟ್ಟಿ	ಕೆ.ಆರ್.ಸಿದ್ದೇಶ್, ಬೆಂಗಳೂರು	
ಗೌರಮ್ಮ ಕಾಶಪ್ಪ-ಪಾಟೀಲ್	ವಿರೇಶ ದೇವೇಂದ್ರಪ್ಪ ಇಂಗಳಳ್ಳಿ, ಧಾರವಾಡ	5,000
ಶಾರದಮ್ಮ ಮತ್ತು ಮಕ್ಕಳು, ಬೆಂಗಳೂರು		

ಗುರು ಕಾಣಿಕೆ

ಭವಾನಿ ಶಿವಾನಂದ, ಬೆಂಗಳೂರು 2001 ಸಾಕಮ್ಮ, ಬೆಂಗಳೂರು ರಗ್ಗು ಕೊಟಿಸಿದ್ದಾರೆ 1100
ಸವದತ್ತಿಯಲ್ಲಮ್ಮ ಪುರಸಭೆ ಸಿಬ್ಬಂದಿವರ್ಗ, ಸವದತ್ತಿ 1111 (ಬಸವ ಕಲ್ಯಾಣದ ಅನಾಥಾಲಯದ ಮಕ್ಕಳಿಗೆ)

ಬಸವ ಮಂಟಪದಲ್ಲಿ ವಾರದ ದಾಸೋಹಕ್ಕೆ 2500 ಸಲ್ಲಿಸಿದವರು

21-7-2005 ಬಸವರಾಜ ದಾಲಗೊಂಡೆ

7-8-2005 ಕುಸುಮ.ಬಿ.ಜಗದೀಶ ಜೆ.ಪಿ.ನಗರ, ಬೆಂಗಳೂರು

14-8-2005 ಶೋಭಾ ಮುನವಳ್ಳಿ

21-8-2005 ಅರ್ಚನಾ ಮತ್ತು ಇಂದುಶೇಖರ್

28-8-2005 ಸ್ನೇಹ ಮತ್ತು ಕುಟುಂಬ ವರ್ಗ ಯೋಗೀಶಾಚಾರ್ಯ ಮತ್ತು ಅಶ್ವಿನಿ

ಅನಾಥಾಲಯಗಳಿಗೆ

ಬಸವ ಗಂಗೋತ್ರಿ :

ವಲ್‌ನೆಟ್ ಸಿಸ್ಟಮ್ಸ್ ರೇಖಾ ಚಂದ್ರಶೇಖರ 2000

ಟಿ.ಸಿ.ಸುಮಾ, ಬೆಂಗಳೂರು 1000

ಎಲ್.ಹೆಚ್.ಪಾಟೀಲ್, ಬೆಂಗಳೂರು 5000

ಮಹೇಶ್, ರಾಜಾಜಿನಗರ, ಬೆಂಗಳೂರು 2500 (ಸ್ವೆಟರ್ ಖರೀದಿಸಲಾಗಿದೆ)

ಬಸವ ಗಂಗೋತ್ರಿ ಅನಾಥಾಲಯ ಕಟ್ಟಡಕ್ಕೆ ಶರಣರುಗಳಾದ :

ಬಿ.ರಾಘವೇಂದ್ರ, ಬೆಂಗಳೂರು 11001

ಗೀತಾ ಜಗದೀಶ್, ಬೆಂಗಳೂರು 5000

ಧಾರವಾಡದ ಅಕ್ಕಮಹಾದೇವಿ ಅನಾಥಾಲಯಕ್ಕೆ

ಕಮಲಾಬಾಯಿ ಗಿರಿ, ಧಾರವಾಡ 5000

ಶಿವಾನಂದ.ಆರ್.ಲೋಲಸ್ಸವರು, ಧಾರವಾಡ 2100

ರಾಧಾ ಸುರೇಶ್ ಕಡೇಮನಿ, ಸವದತ್ತಿ 1001

ಶಾರದಮ್ಮ ಬೆಂಗಳೂರು ರಗ್ಗುಗಳನ್ನು ಕೊಟ್ಟಿದ್ದಾರೆ

ವಿಶೇಷ ಮನವಿ :

ಚಳಿಗಾಲ ಆರಂಭವಾಗುವುದರೊಳಗೆ ಸ್ವೆಟರ್ ಮತ್ತು ರಗ್ಗುಗಳ ವ್ಯವಸ್ಥೆ ಮಾಡಬೇಕಾಗಿದೆ. ಸಹಕರಿಸಲು ದಾನಿಗಳಿಗೆ ಕೋರಿಕೆ.

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪಾದವನ್ನು ಕೊಟಲೆಂದು ಹಾರೈಸುತ್ತೇವೆ.

ಸವದತ್ತಿಯಲ್ಲಿ ಪ್ರವಚನ ಮುಕ್ತಾಯ

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಮಾತೆ ಗಂಗಾದೇವಿಯವರು ಬೆಳಗಾಂ ಜಿಲ್ಲೆಯ ಸವದತ್ತಿಯ ಮಾಮನಿ ಕಲ್ಯಾಣ ಮಂಟಪದಲ್ಲಿ ದಿ. 3-7-2005 ರಿಂದ ಪ್ರತಿನಿತ್ಯ ಪ್ರವಚನ ಮಾಡುತ್ತಿದ್ದು ದಿ.15-8-2005 ಪ್ರವಚನವು ಮಂಗಲಗೊಂಡಿತು.

ಬೈಲಹೊಂಗಲ ರಾ.ಬ.ದಳದ ವಾರ್ಷಿಕೋತ್ಸವ ಬೆಳಗಾಂವ ಜಿಲ್ಲೆಯ ಬೈಲಹೊಂಗಲದಲ್ಲಿ ದಿ.16-8-2005 ಮತ್ತು 17 ರಂದು ಪ್ರವಚನ ನೀಡಿದಲ್ಲದೆ ರಾ.ಬ.ದಳದ ವಾರ್ಷಿಕೋತ್ಸವದಲ್ಲಿ ಭಾಗಿಗಳಾಗಿ ಷಡುಗಣಾಧೀಶರ ವಿಶೇಷ ಭಾವ ಚಿತ್ರಗಳನ್ನು ಅನಾವರಣ ಮಾಡಿದರು

ದಿ.18ರಂದು ಪ್ರವಾಹ ಸಂತ್ರಸ್ತರ ನೆರವಿಗಾಗಿ ರಾ.ಬ.ದಳದ ಪ್ರಮುಖರೊಡನೆ ನಗರದಲ್ಲಿ ಪಾದಯಾತ್ರೆ ಮಾಡಿ ಹಣ ಮತ್ತು ವಸ್ತುಗಳನ್ನು ಸಂಗ್ರಹಿಸಿದರು.

ಹೈದರಾಬಾದಿನಲ್ಲಿ ಪ್ರವಚನ ಕಾರ್ಯಕ್ರಮ

ದೇವ(ಭಾನು)ವಾರ ದಿ.21ರಂದು ಹೈದರಾಬಾದ್ ನಗರದ ಜಿಯಾಗುಡ ಪ್ರದೇಶದ ಕೇಶವನಗರದಲ್ಲಿರುವ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಹಿಂದಿಯಲ್ಲಿ ವಿಶ್ವಧರ್ಮ ಪ್ರವಚನವನ್ನು ಆರಂಭಿಸಿದ್ದಾರೆ. ಪ್ರತಿನಿತ್ಯ ಸಂಜೆ 6-30ರಿಂದ 8-30ರವರೆಗೆ ಪ್ರವಚನವು ನಡೆಯುತ್ತಿದ್ದು ನಾಲ್ಕು ವಾರಗಳ ಕಾಲ ಸಾಗಲಿದೆ.